ಸಂಪುಟ: 04 ಸಂಚಿಕೆ: 275 ಪುಟಗಳು: 08 ಬುಧವಾರ 18 ಡಿಸೆಂಬರ್ 2024

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ವಿಸ್ತಾರವಾಗುತ್ತ
ಹೋಗುವುದು ಜೀವನ.
ಸಂಕುಚಿತವಾಗುತ್ತ
ಸಾಗುವುದೇ ಸಾವು.
ಪ್ರೀತಿಯೇ ಜೀವನ,
ದ್ವೇಷವೇ ಸಾವು.


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಪಂಚಮಸಾಲಿ ಸಮುದಾಯಕ್ಕೆ ಸಿಎಂ ಅನ್ಯಾಯ ಮಾಡಿಲ್ಲ

• ಉದಯವಾಹಿನಿ, ಬೆಳಗಾವಿ

ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಅವರ ಆ ಸಮಾಜಕ್ಕೆ ಅನ್ಯಾಯ ಮಾಡಿಲ್ಲ, ಈ ವಿಚಾರವಾಗಿ ಸಿದ್ದರಾಮಯ್ಯ ಅವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ಮಾಣಿಪ್ಪಾಡಿ ಅವರು ಮಾಡಿರುವ 150 ಕೋಟಿ ರೂಪಾಯಿ ಆಮಿಷ ಆರೋಪ ಪ್ರಕರಣ ಸಿಬಿಐ ತನಿಖೆಗೆ ವಹಿಸುವಂತೆ ವಿಜಯೇಂದ್ರ ಅವರ ಹೇಳಿಕೆ ಬಗ್ಗೆ ಮಾಧ್ಯಮದವರು ಕೇಳಿದಾಗ, ಮುಂದೆ ಈ ವಿಚಾರವಾಗಿ ಚರ್ಚೆ ಮಾಡೋಣ ಎಂದರು. ಸಿನಿಮಾ ಕ್ರೀಡೆ ಖರ್ಗೆ ಅವರು ವಕ್ಸ್ ಆಸ್ತಿ ಕಬಳಿಕೆ ಮಾಡಿದ್ದಾರೆ ಎಂಬ ಆರೋಪದ ಬಗ್ಗೆಯೂ ದಾಖಲೆ ಸಮೇತ ಸದನದಲ್ಲಿ ಚರ್ಚೆ ಮಾಡೋಣ ಬಿಡಿ ಎಂದು ಡಿಕೆಶಿ ಪ್ರತಿಕ್ರಿಯೆ ನೀಡಿದರು. ಇನ್ನು ಪಂಚಮಸಾಲಿ ಮೀಸಲಾತಿ ಹೋರಾಟದ ಕುರಿತು ಪ್ರತಿಕ್ರಿಯಿಸಿದ ಸಚಿವ ಲಕ್ಷ್ಮಿ ಹೆಬ್ಬಾಳ್ಕರ್ ಅವರು, ಕಾನೂನಿನ ಚೌಕಟ್ಟಿನಲ್ಲಿ ಹೋರಾಟ ಮಾಡೋಣ. ಪ್ರಚೋದನಾತ್ಮಕ ಹೋರಾಟ ಮಾಡುವುದು ಬೇಡ. ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ ಎಂದು ಹೇಳಿದರು.

## ಬಿಬಿಎಂಪಿ ಮಾದರಿಯಲ್ಲಿ ಇ-ಆಸ್ತಿ ನೀಡಿಕೆ ಕಾರ್ಯ ಜಾರಿ

• ಉದಯವಾಹಿನಿ, ಬೆಳಗಾವಿ

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಿಬಿಎಂಪಿ ಮಾದರಿಯಲ್ಲಿ ಎ - ಖಾತಾ ಮತ್ತು ಬಿ-ಖಾತಾ ಎಂದು ಇ-ಆಸ್ತಿ ನೀಡುವ ಕಾರ್ಯವನ್ನು ಜಾರಿಗೊಳಿಸಲಾಗುವುದು ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹಿಂ ಖಾನ್ ತಿಳಿಸಿದರು. ಕಾಯ್ದೆ, 2020ರ ಕಲಂ 144(6) ಮತ್ತು (21)ರ ಅಂಶವನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳು / ನಗರ ಸ್ಥಳೀಯ ಸಂಸ್ಥೆಗಳಿಗೂ ಸಹ ವಿಸ್ತರಿಸಲು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಹಾಗೂ ಕರ್ನಾಟಕ ಪುರಸಭೆಗಳ ಅಧಿನಿಯಮ ಪಾಲಿಕೆ ಕಾಯ್ದೆ, 2020ರ ಕಾಲಂ 144(6) ಮತ್ತು (21)ರ ಅಂಶವನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳು / ನಗರ ಸ್ಥಳೀಯ ಸಂಸ್ಥೆಗಳಿಗೂ ಸಹ ವಿಸ್ತರಿಸಲು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಹಾಗೂ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರಲ್ಲಿ ಅಳವಡಿಸಿಕೊಳ್ಳುವ ಸಂಬಂಧ ನಗರ ಸ್ಥಳೀಯ ಸಂಸ್ಥೆಗಳಿಗೂ ಸಹ ವಿಸ್ತರಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಕ್ಕೆ ತಿದ್ದುಪಡಿ ತರಲಾಗಿದೆ. ಅದರಂತೆ, ನಿಯಮಗಳಲ್ಲಿ ತಿದ್ದುಪಡಿ ತರಲು ಕ್ರಮ ವಹಿಸಲಾಗುತ್ತಿದೆ ಎಂದರು.

## ಅಸ್ವಸ್ಥರಾಗಿ ಕುಸಿದುಬಿದ್ದ ಅತಿಥಿ ಉಪನ್ಯಾಸಕಿಗೆ ಚಿಕಿತ್ಸೆ

• ಉದಯವಾಹಿನಿ, ಬೆಳಗಾವಿ

ಪ್ರತಿಭಟನಾ ಸ್ಥಳದಲ್ಲಿ ಕುಸಿದು ಬಿದ್ದ ಅತಿಥಿ ಉಪನ್ಯಾಸಕಿ ಅಸ್ವಸ್ಥರಾದ ಘಟನೆ ಬೆಳಗಾವಿಯ ಕೊಂಡಸಕೊಪ್ಪ ಸಮೀಪ ನಡೆದಿದೆ. ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸುತ್ತಿದ್ದು ಪ್ರತಿಭಟನಾ ಸ್ಥಳದಲ್ಲಿ ಅತಿಥಿ ಉಪನ್ಯಾಸಕಿ ಅಸ್ವಸ್ಥರಾಗಿದ್ದಾರೆ. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ ಮಾನವೀಯತೆ ಮೆರೆದಿದ್ದಾರೆ. ಅಸ್ವಸ್ಥರಾಗಿದ್ದ ಉಪನ್ಯಾಸಕಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ತಮ್ಮ ಕಾರ್ ನಲ್ಲಿಯೇ ಕರೆದೊಯ್ದು ಬೆಳಗಾವಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.


## ಸ್ನೇಹಮಯಿ ಕೃಷ್ಣ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರ ವಿರುದ್ಧದ ಎಫ್ ಐಆರ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಮೈಸೂರಿನ ಚಾಮುಂಡೇಶ್ವರಿ ಬೆಟ್ಟದ ಕಾರ್ಯದರ್ಶಿ ರೂಪಾ ಅವರು ನೀಡಿದ್ದ ಕರ್ತವ್ಯಕ್ಕೆ ಅಡ್ಡಿಪಡಿಸಿದ ದೂರು ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದರು. ಇನ್ನಷ್ಟು ತಿಳಿಯಿರಿ ಸ್ನೇಹಮಯಿ ವಿರುದ್ಧ ದಾಖಲಿಸಿದ ಪ್ರಕರಣಕ್ಕೆ ತಡೆಯಾಜ್ಞೆ ನೀಡಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಚಾಮುಂಡೇಶ್ವರಿ ದೇವಿಗೆ ಬಂದಿರುವ ಹರಕೆ ಸೀರೆ ಮಾರಾಟ ಮಾಡಲಾಗುತ್ತಿದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದರು. ಈ ಬಗ್ಗೆ ದೂರು ದಾಖಲಿಸಿಕೊಳ್ಳದೆ ಸ್ನೇಹಮಯಿ ಕೃಷ್ಣ ಅವರ ವಿರುದ್ಧವೇ ಕಾರ್ಯದರ್ಶಿ ರೂಪಾ ದೂರು ನೀಡಿದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ದೇವಿಗೆ ಹಾಕಿದ್ದ ಸೀರೆ ಮಾರಾಟವಾಗಿದ್ದರೆ ಅಕ್ಷಮ್ಯ ಅಪರಾಧ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ವ್ಯಕ್ತಪಡಿಸಿದ್ದು, ತಡೆಯಾಜ್ಞೆ ನೀಡಿದೆ.

# ಮೋದಿ ಸರ್ಕಾರ ಮಸೂದೆ ಅಂಗೀಕಾರ



■ ಲೋಕಸಭೆಯಲ್ಲಿ 'ಒಂದು ದೇಶ, ಒಂದು ಚುನಾವಣೆ' ವಿಧೇಯಕ ಮಂಡಿಸಿದ ಕೇಂದ್ರ ಸರ್ಕಾರ ■ ಅಸಂವಿಧಾನಿಕ ಎಂದ ಪ್ರತಿಪಕ್ಷಗಳು ■ ಬಿಲ್ ಮಂಡನೆ ವೇಳೆ 20ಕ್ಕೂ ಹೆಚ್ಚು ಬಿಜೆಪಿ ಸಂಸದರು ಗೈರು ■ ಮಸೂದೆ ಮಂಡಿಸಿದ ಅರ್ಜುನ್ ರಾಮ್‌ಮೇಘವಾಲ್

**ಎನ್‌ಡಿಎ ಮಿತ್ರಪಕ್ಷಗಳ ಬೆಂಬಲ**

ಎನ್‌ಡಿಎ ಕೂಟದ ಭಾಗವಾಗಿರುವ ತೆಲುಗು ದೇಶಂ ಪಕ್ಷವು (ಟಿಡಿಪಿ) ವಿಧೇಯಕಗಳಿಗೆ ಸಂಪೂರ್ಣ ಬೆಂಬಲ ಘೋಷಿಸಿತು. ಸಂಸದ ಚಂದ್ರಶೇಖರ್ ಪೆಮ್ಮಸಾನಿ ಮಸೂದೆಗಳಿಗೆ ಪಕ್ಷದ ಪೂರ್ಣ ಬೆಂಬಲವಿದೆ ಎಂದರು.




1 ಕೇಂದ್ರ ಸರ್ಕಾರದಿಂದ ಒಂದು ದೇಶ, ಒಂದು ಚುನಾವಣೆ ಮಸೂದೆ ಮಂಡನೆ

2 ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷದಿಂದ ವಿರೋಧ

3 ಮಸೂದೆಯ ಪರವಾಗಿ 269 ಸಂಸದರ ಮತ, ವಿರುದ್ಧವಾಗಿ 198 ಸಂಸದರ ಮತ

**ಆಡಳಿತಕ್ಕೆ ಪೂರಕ**



ಒಂದು ದೇಶ ಒಂದು ಚುನಾವಣೆ ದೇಶದ ಆಡಳಿತ ವ್ಯವಸ್ಥೆಗೆ ಪೂರಕವಾಗಲಿದ್ದು, ಕೇಂದ್ರ ಕೈಗೊಳ್ಳುವ ಒಂದು ದೇಶ ಒಂದು ಚುನಾವಣೆ ನಿರ್ಧಾರ ಬೆಂಬಲಿಸುವುದಾಗಿ ಟಿಡಿಪಿ ಮುಖ್ಯಸ್ಥ, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದ್ದಾರೆ. ದೇಶಕ್ಕೆ ಒಳಿತಾಗುವ ಯಾವುದೇ ನಿರ್ಧಾರವನ್ನು ನಾವು ಬೆಂಬಲಿಸುತ್ತೇವೆ. ಎನ್ ಡಿಎ ಸರ್ಕಾರದ ಒಂದು ದೇಶ ಒಂದು ಚುನಾವಣೆಗೆ ಪಕ್ಷದ ಬೆಂಬಲವಿದೆ.

• ಉದಯವಾಹಿನಿ, ನವದೆಹಲಿ


ವಿಧಾನಸಭೆ ಮತ್ತು ಲೋಕಸಭೆಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಅನುಕೂಲ ಮಾಡಿಕೊಡುವ ಒಂದು ರಾಷ್ಟ್ರ ಒಂದು ಚುನಾವಣೆ ಸಾಂವಿಧಾನಿಕ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಮಂಗಳವಾರ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಮಂಡಿಸಿದರು. ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೇ ಕೇಂದ್ರ ಸರ್ಕಾರ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಸಂವಿಧಾನಾತ್ಮಕ ತಿದ್ದುಪಡಿ ಮಸೂದೆ ಮಂಗಳವಾರ ಲೋಕಸಭೆಯಲ್ಲಿ ಮಂಡಿಸಿದೆ. ಆದರೆ, ಇದಕ್ಕೆ ಪ್ರತಿಪಕ್ಷಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸಿವೆ. ಈ ಮಸೂದೆಗೆ ಇಂಡಿಯಾ ಒಕ್ಕೂಟ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಸರ್ಕಾರದ ಈ ಕ್ರಮ ಅಸಾಂವಿಧಾನಿಕವಾಗಿದೆ ಎಂದು ಕಾಂಗ್ರೆಸ್ ಕಿಡಿಕಾರಿದೆ.

ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಮಾತನಾಡಿ, ಒಂದು ದೇಶ ಒಂದು ಚುನಾವಣೆ ಮಸೂದೆ ಚುನಾವಣಾ ಸುಧಾರಣೆಗಾಗಿ ತರುತ್ತಿರುವ ಮಸೂದೆ ಅಲ್ಲ, ಒಬ್ಬ ವ್ಯಕ್ತಿಯ ಆಸೆ ಈಡೇರಿಸಲು ತರುತ್ತಿರುವ ಮಸೂದೆ ಎಂದು ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು. ಡಿಎಂಕೆಯ ಟಿ.ಆರ್ ಬಾಲು ಮಾತನಾಡಿ, ಒಂದು ದೇಶ ಒಂದು ಚುನಾವಣೆ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಈ ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆಸುವ ಅಗತ್ಯವಿದೆ. ಹೀಗಾಗಿ ಈ ಮಸೂದೆಯನ್ನು ಸಂಸತ್ತಿನ ಜಂಟಿ ಸಂಸದೀಯ ಮಂಡಳಿಗೆ ಒಪ್ಪಿಸುವಂತೆ ಆಗ್ರಹಿಸಿದ್ದಾರೆ.


**ಒಂದು ದೇಶ, ಒಂದು ಚುನಾವಣೆ ಎಂದರೆ ಏನು:** ಒನ್ ನೇಷನ್ ಒನ್ ಎಲೆಕ್ಷನ್ ಅಂದ್ರೇ ರಾಷ್ಟ್ರದ ಎಲ್ಲಾ ಚುನಾವಣೆ ಗಳನ್ನು ಒಂದೇ ಬಾರಿಗೆ ನಡೆಸುವ ಪ್ರಯತ್ನ. ರಾಷ್ಟ್ರದಲ್ಲಿ ಲೋಕ ಸಭಾ ಚುನಾವಣೆ, ವಿಧಾನಸಭಾ ಚುನಾವಣೆ, ಸ್ಥಳೀಯ ಸಂಸ್ಥೆ ಗಳ ಚುನಾವಣೆ ಬೇರೆ ಬೇರೆ ಅವಧಿಯಲ್ಲಿ ನಡೆ ಯುತ್ತಿದ್ದು, ಅವುಗಳನ್ನು ಏಕಕಾಲದಲ್ಲಿ ನಡೆಸ ಬೇಕು ಎನ್ನುವ ಉದ್ದೇಶ. ವಿಧಾನಸಭೆ, ಲೋಕಸಭೆ ಸೇರಿ ಭಾರತದಲ್ಲಿ ಸುಮಾರು 400 ಚುನಾವಣೆಗಳು ನಡೆದಿವೆ. ಇದರಿಂದ ಭಾರೀ ಹಣ ಖರ್ಚಾಗುತ್ತಿದೆ. ಅದರಂತೆ ಲೋಕಸಭೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಮಸೂದೆ ಮಂಡನೆಯಾಗಿದೆ.

**ವಿಪಕ್ಷಗಳಿಂದ ತೀವ್ರ ವಿರೋಧ**





ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ವಿಧೇಯಕಗಳ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್‌ನ ಹಿರಿಯ ಸಂಸದ ಮನೀಶ್ ತಿವಾರಿ, ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ರಚನೆಗಳಿಗೆ ಈ ವಿಧೇಯಕ ವಿರುದ್ಧವಾಗಿದೆ ಎಂದರು. ಸಮಾಜವಾದಿ ಪಕ್ಷದ ಧರ್ಮೇಂದ್ರ ಯಾದವ್, ಈ ಮಸೂದೆಯು ಸಂವಿಧಾನದ ರಚನೆಕಾರರು ವಿವರಿಸಿರುವ ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿಯಾಗಿದೆ ಎಂದು ಆರೋಪಿಸಿದರು. ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ, ಇದು ಸಂವಿಧಾನದ ಮೂಲ ರಚನೆಗೆ ಇದು ಹೊಡೆತ ನೀಡುತ್ತದೆ. ಪ್ರಸ್ತಾವಿತ ವಿಧೇಯಕಗಳು ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದರು.



**ಆಡಳಿತದಲ್ಲಿ ಸ್ಥಿರತೆ**

ಮೊದಲನೇಯದು ಒಂದು ದೇಶ, ಒಂದು ಚುನಾವಣೆ ಬಂದರೆ ಆಡಳಿತದಲ್ಲಿ ಸ್ಥಿರತೆ ಬರಲಿದೆ. ದೇಶದ ವಿವಿಧ ಭಾಗಗಳಲ್ಲಿ ಈಗ ಬೇರೆ ಬೇರೆ ಸಮಯದಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ ಪಕ್ಷಗಳು, ನಾಯಕರು, ಜನಪ್ರತಿನಿಧಿಗಳು ಚುನಾವಣೆಗೆ ತಯಾರಿಯನ್ನು ನಡೆಸುತ್ತಲೇ ಇರುತ್ತಾರೆ. ಆದರೆ, ಏಕಕಾಲದಲ್ಲಿ ಎಲ್ಲಾ ಕಡೆಯೂ ಚುನಾವಣೆ ನಡೆದಾಗ ಅಭಿವೃದ್ಧಿ ಚಟುವಟಿಕೆಗಳು, ಜನರ ಕಲ್ಯಾಣದ ಕಡೆ ಸರ್ಕಾರಗಳು, ಜನಪ್ರತಿನಿಧಿಗಳು ತಮ್ಮ ಗಮನವನ್ನು ಕೇಂದ್ರಿಕರಿಸಬಹುದು.

## ರಾಜ್ಯದಲ್ಲಿಯೂ ಆಟೋ ಚಾಲಕರಿಗೆ ಉಚಿತ ವಿಮೆ

• ಉದಯವಾಹಿನಿ, ಬೆಂಗಳೂರು

ದೆಹಲಿ ಸರ್ಕಾರ ಈಗಾಗಲೇ ಸಾಕಷ್ಟು ಜನಪರ ಯೋಜನೆಗಳನ್ನು ಜಾರಿಗೆ ತಂದು ಸಾರ್ವಜನಿಕರಲ್ಲಿ ಮೆಚ್ಚುಗೆ ಪಡೆದಿದ್ದು, ಸದ್ಯ ಆಟೋ ಚಾಲಕರು, ಅವರ ಕುಟುಂಬಕ್ಕೆ ಅನುಕೂಲವಾಗುವಂತ ಕೆಲಸ ಮಾಡಿದೆ ಅದೇ ರೀತಿ ನಮ್ಮ ರಾಜ್ಯದ ಆಟೋ ಚಾಲಕರು, ಅವರ ಕುಟುಂಬಕ್ಕೆ ಅದೇ ಮಾದರಿಯಲ್ಲಿ ಯೋಜನೆಗಳನ್ನು ಕಲ್ಪಿಸಬೇಕು ಎಂದು ಆಮ್ ಆದ್ಮ ಪಾರ್ಟಿ ಒತ್ತಾಯಿಸಿದೆ.

ಇನ್ನಷ್ಟು ತಿಳಿಯಿರಿ ಪ್ರಸ್ತುತ ದೆಹಲಿ ಸರ್ಕಾರ ಆಟೋ ಚಾಲಕರಿಗೆ ಉಚಿತವಾಗಿ 10 ಲಕ್ಷ ರೂಗಳ ವಿಮೆ, 5 ಲಕ್ಷ ರೂಗಳ ಅಪಘಾತ ವಿಮೆ, ಆಟೋ ಚಾಲಕರ ಹೆಣ್ಣು ಮಕ್ಕಳ ಮದುವೆಗೆ 1 ಲಕ್ಷ ರೂಗಳ ಧನಸಹಾಯ, ಯೂನಿಫಾರಂ ಖರೀದಿಗಾಗಿ 2500 ರೂಪಾಯಿಗಳ ಧನಸಹಾಯ, ಚಾಲಕರುಗಳಿಗಾಗಿ



ಸರ್ಕಾರದಿಂದಲೇ ಪ್ರತ್ಯೇಕ ಮೊಬೈಲ್ ಆಯಪ್ ಹಾಗೂ ಆಟೋ ಚಾಲಕರುಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಚಿತ ಕೋಚಿಂಗ್ ವ್ಯವಸ್ಥೆ ಕಲ್ಪಿಸಿದೆ. ರಾಜ್ಯದಲ್ಲಿಯೂ ಕೂಡಲೇ ಈ ಸೌಲಭ್ಯಗಳನ್ನು ಜಾರಿಗೊಳಿಸಬೇಕೆಂದು ಆಮ್ ಆದ್ಮ ಪಕ್ಷದ ಆಟೋ ಘಟಕದ ರಾಜ್ಯಾಧ್ಯಕ್ಷ ಅಯುಬ್ ಖಾನ್, ಪೀಸ್ ಆಟೋ ಸಂಘಟನೆ ಅಧ್ಯಕ್ಷ ರಘು ನಾರಾಯಣಗೌಡ ನಿಯೋಗ ಸಾರಿಗೆ ಮಂತ್ರಿ, ರಾಮಲಿಂಗ ರೆಡ್ಡಿಯವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದಾರೆ.

## ಐವಿ ದ್ರಾವಣ ಉತ್ಪಾದಿಸದಂತೆ ನಿರ್ಬಂಧ

• ಉದಯವಾಹಿನಿ, ಬೆಳಗಾವಿ

ರಿಂಗರ್ ಲ್ಯಾಕ್ಟೇಟ್ ಐವಿ ದ್ರಾವಣ ಪೂರೈಸಿದ್ದ ಪಶ್ಚಿಮ ಬಂಗ್ಲಾ ಕಂಪನಿಯನ್ನ ಈಗಾಗಲೇ ಬ್ಲಾಕ್ ಲಿಸ್ಟ್ ಗೆ ಸೇರಿಸಲಾಗಿದ್ದು, ಪ್ರಕರಣದ ತನಿಖೆ ನಡೆಯುವ ವರೆಗು ಕಂಪನಿ ಐವಿ ದ್ರಾವಣ ಉತ್ಪಾದನೆ ಮಾಡದಂತೆ ಕಂಪನಿಯ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಮಂಗಳವಾರ ವಿಧಾನ ಪರಿಷತ್‌ನಲ್ಲಿ ಬಾಣಂತಿಯರ ಸಾವುಗಳ ಕುರಿತು ಮಾಹಿತಿ ನೀಡಿದ ಸಚಿವ ದಿನೇಶ್ ಗುಂಡೂರಾವ್, ದೇಶದಲ್ಲಿ ಔಷಧ ನಿಯಂತ್ರಣ ವ್ಯವಸ್ಥೆಯಲ್ಲಿ ಇರುವ ಲೋಪ ದೋಷಗಳು ಈ ರೀತಿಯ ಪ್ರಕರಣಗಳಿಗೆ ಕಾರಣವಾಗಿದೆ ಎಂದರು. ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಐವರು ಬಾಣಂತಿಯರ ಸಾವಿನ ಪ್ರಕರಣ ಹಿನ್ನೆಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ತಜ್ಞ ವೈದ್ಯರ ತಂಡವನ್ನ ರಚಿಸಿ



ಪರಿಶೀಲಿಸಲಾಗಿತ್ತು. ತಜ್ಞರ ತಂಡ ಐವಿ ರಿಂಗರ್ ಲ್ಯಾಕ್ಟೇಟ್ ಬಗ್ಗೆ ಸಂಶಯ ವ್ಯಕ್ತಪಡಿಸಿತು. ವರದಿಯ ಹಿನ್ನೆಲೆಯಲ್ಲಿ ಮುಂಜಾಗ್ರತ ಕ್ರಮವಾಗಿ ಪಶ್ಚಿಮ ಬಂಗಾ ಕಂಪನಿ ಪೂರೈಸಿದ್ದ ಎಲ್ಲಾ ಬ್ಯಾಚ್‌ಗಳ ದ್ರಾವಣವನ್ನ ತಡೆಹಿಡಿದು ಟೆಸ್ಟಿಂಗ್ ಮಾಡಿಸಲಾಗಿದೆ. ಅಲ್ಲದೇ ಉತ್ತಮ ಗುಣಮಟ್ಟ ಹೊಂದಿರದ 9 ಬ್ಯಾಚ್‌ಗಳ ಹಿನ್ನೆಲೆಯಲ್ಲಿ ಕಂಪನಿಯವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

# ಸರಕು ಮತ್ತು ಸೇವೆಗಳ ತೆರಿಗೆ, ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ವಿಧೇಯಕ ಅಂಗೀಕಾರ

● ರಾಜ್ಯದಲ್ಲಿ ವ್ಯಾಪಾರ-ವಹಿವಾಟು ಸ್ನೇಹಿ ಹೆಜ್ಜೆಯ ಭಾಗವಾಗಿ ಸರಕು ಮತ್ತು ಸೇವೆಗಳ ತೆರಿಗೆ 2024 ವಿಧೇಯಕಕ್ಕೆ ಎರಡನೇ ತಿದ್ದುಪಡಿ


• ಉದಯವಾಹಿನಿ, ಬೆಳಗಾವಿ ಸುವರ್ಣಸೌಧ

ಮಂಗಳವಾರ ವಿಧಾನಸಭೆಯಲ್ಲಿ ಅಂಗೀಕಾರಗೊಂಡ ಸರಕು ಮತ್ತು ಸೇವೆಗಳ ತೆರಿಗೆ 2024ನೇ ಸಾಲಿನ ಎರಡನೇ ತಿದ್ದುಪಡಿ ವಿಧೇಯಕ ಹಾಗೂ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ವಿಧೇಯಕ 2024 ಅನ್ನು ಮಂಗಳವಾರ ವಿಧಾನ ಪರಿಷತ್ ನಲ್ಲೂ ಸಹ ಕೂಲಂಕುಷ ಚರ್ಚೆಯ ನಂತರ ಅಂಗೀಕಾರ ನೀಡಲಾಗಿದೆ. ಇನ್ನಷ್ಟು ತಿಳಿಯಿರಿ ತೆರಿಗೆದಾರರ ಹಾಗೂ ತೆರಿಗೆ ಸಂಗ್ರಹಿಸುವ ಅಧಿಕಾರಿಗಳ ನಡುವಿನ ಗೊಂದಲಕ್ಕೆ ತೆರೆ ಎಳೆಯುವ ಹಾಗೂ ರಾಜ್ಯದಲ್ಲಿ ವ್ಯಾಪಾರ-ವಹಿವಾಟು ಸ್ನೇಹಿ ಹೆಜ್ಜೆಯ ಭಾಗವಾಗಿ ಸರಕು ಮತ್ತು ಸೇವೆಗಳ ತೆರಿಗೆ 2024 ವಿಧೇಯಕ್ಕೆ ಎರಡನೇ ತಿದ್ದುಪಡಿ ಮಾಡಲಾಗುತ್ತಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಸ್ಪಷ್ಟಪಡಿಸಿದರು.

ಸೋಮವಾರ ವಿಧಾನಸಭೆಯಲ್ಲಿ ಸರಕು ಮತ್ತು ಸೇವೆಗಳ ತೆರಿಗೆ 2024ನೇ ಸಾಲಿನ ಎರಡನೇ ತಿದ್ದುಪಡಿ ವಿಧೇಯಕ ಮಂಡಿಸಿ ಮಾತನಾಡಿದ ಅವರು, ಎಲ್ಲೆಲ್ಲಿ ತೆರಿಗೆದಾರರ ಹಾಗೂ ತೆರಿಗೆ ಅಧಿಕಾರಿಗಳ ನಡುವೆ ಗೊಂದಲ ಇದೆ, ಈ ಗೊಂದಲಗಳಿಗೆ ತೆರೆ ಎಳೆಯುವ ಹಾಗೂ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದು ಈ ತಿದ್ದುಪಡಿಯ ಪ್ರಮುಖ ಉದ್ದೇಶ. ಕಳೆದ ನಾಲ್ಕೈದು ವರ್ಷಗಳ ಅನುಭವದಲ್ಲಿ ಎಲ್ಲೆಲ್ಲಿ ಕಾನೂನುಗಳ ಅಗತ್ಯ ಇದೆ. ಅದನ್ನು ಅನುಭವದ ಆಧಾರದಲ್ಲಿ



ಗುರುತಿಸಲಾಗಿದೆ. ಹಾಗೂ ಕೆಲವು ವಿಚಾರಗಳನ್ನು ವ್ಯಾಕ್ಯಾನ ಮಾಡುವಾಗ ಒಂದಕ್ಕೊಂದು ತದ್ವಿರುದ್ಧವಾಗಿದ್ದ ವಿಚಾರಗಳನ್ನು ಸರಳೀಕರಣಗೊಳಿಸುವ ಕೆಲಸ ಈ ತಿದ್ದುಪಡಿಯಲ್ಲಿ ಮಾಡಲಾಗಿದೆ ಎಂದರು. ಸರ್ಕಾರ ಹಾಗೂ ತೆರಿಗೆದಾರರ ನಡುವೆ 80,000 ಸಾವಿರ ವ್ಯಾಜ್ಯ ಪ್ರಕರಣಗಳಿಗೆ. ಇಷ್ಟು ಪ್ರಕರಣಗಳ



ಮದ್ಯ ಮಾಡಲು ಉಪಯೋಗವಾಗುವ ಸ್ಪಿರಿಟ್‌ಗೆ ತೆರಿಗೆ ವಿಧಿಸುವ ಅಧಿಕಾರದ ನಡುವೆ ರಾಜ್ಯ-ಕೇಂದ್ರ ಸರ್ಕಾರಗಳ ನಡುವೆ ತಕರಾರು ಈ ಹಿಂದಿನಿಂದಲೂ ಇತ್ತು. ಆದರೆ, ಇದೀಗ ಸ್ಪಿರಿಟ್ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯವಾಗಿದ್ದು ಇದರ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸಬಾರದು ಎಂದು ಜಿಎಸ್‌ಟಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಹೀಗಾಗಿ ಸ್ಪಿರಿಟ್ ಅನ್ನು ಜಿಎಸ್‌ಟಿಯಿಂದ ತೆಗೆದು ಹಾಕುತ್ತಿದ್ದೇವೆ

-ಕೃಷ್ಣ ಬೈರೇಗೌಡರು, ಸಚಿವ

ಕಾರಣದಿಂದ ರೂ.15,000 ಕೋಟಿ ತಕರಾರಿನಲ್ಲಿದೆ. ಈಗಿನ ತಿದ್ದುಪಡಿಯಿಂದ ಎಲ್ಲಾ ಪ್ರಕರಣಗಳೂ ಇತ್ಯರ್ಥವಾದರೆ ಖಜಾನೆಗೆ ರೂ.15,000 ಕೋಟಿ ಹಣ ಹರಿದು ಬರುವ ಸಾಧ್ಯತೆ ಇದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು. ಈ ಬಗ್ಗೆಯೂ ಸದನದ ಗಮನ ಸೆಳೆದ ಅವರು, ಅಧಿಕಾರಿಗಳ ಹಾಗೂ ತೆರಿಗೆ ಪಾವತಿದಾರರ ನಡುವೆ ಒಪ್ಪಂದಕ್ಕೆ ಬರದೆ ನಾವು ಅವರು ಎದುರು- ಬದುರು ಪ್ರಕರಣಗಳನ್ನು ನಡೆಸುವಂತಾಗಿದೆ. ಸುಮಾರು 80,000 ವ್ಯಾಜ್ಯ ಪ್ರಕರಣ ನ್ಯಾಯಾಲಯಗಳಲ್ಲಿವೆ. ಆರಂಭದಿಂದಲೂ ಕಾನೂನಲ್ಲಿ ಅವರೊಂತರಾ ವ್ಯಾಖ್ಯಾನ ಮಾಡಿದ್ದಾರೆ, ನಾವೊಂತರಾ ವ್ಯಾಖ್ಯಾನ ಮಾಡಿದ್ದೇವೆ. ಈ ಎಲ್ಲಾ ಪ್ರಕರಣಗಳೂ ಕಾನೂನು ಪ್ರಕ್ರಿಯೆಯಲ್ಲಿರುವ ಕಾರಣ ಬರುತ್ತಿರುವ ತೆರಿಗೆ ಸಹ ನಿಂತುಹೋಗಿದೆ ಎಂದು ವಿಷಾದಿಸಿದರು. ಮುಂದುವರೆದು, ಈ ಹಿಂದೆ ವ್ಯಾಟ್ ಪದ್ಧತಿ (ಮೌಲ್ಯ ವರ್ಧಿತ ತೆರಿಗೆ) ಜಾರಿಯಲ್ಲಿದ್ದ ಸಂದರ್ಭದಲ್ಲಿ ಅಂದಿನ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ವ್ಯಾಟ್ ಬಗೆಗಿನ ವ್ಯಾಜ್ಯಗಳ ಇತ್ಯರ್ಥಕ್ಕೆ ಒನ್ ಟೈಮ್ ಸೆಟಲ್ಮೆಂಟ್ ಗೆ ಅವಕಾಶ ಕೊಟ್ಟಿದ್ದರು. ಪ್ರಸ್ತುತ ಇದೇ ಮಾದರಿಯನ್ನು ಮುಂದುವರೆಸಲು ನಿರ್ಧರಿಸಲಾಗಿದೆ. 80,000 ಪ್ರಕರಣಗಳಿಗೆ ಒನ್‌ಟೈಮ್ ಅವಕಾಶ ಮಾಡಿಕೊಡಲಾಗುತ್ತಿದೆ. ಈಗಲೇ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಂಡರೆ ಬಡ್ಡಿ ಹಾಗೂ ಪೆನಾಲ್ಟಿ ಹೊರತುಪಡಿಸಿ ಮೂಲ ಹಣ ಪಾವತಿ ಮಾಡಿದರೆ ಸಾಕು. 80.000 ಪ್ರಕರಣಗಳಿಂದ ರೂ.15,000 ಕೋಟಿ ಹಣ ತಕರಾರಿನಲ್ಲಿದೆ. ಅವಕಾಶ ನೀಡಿದರೆ, ಹಲವರು ಮುಂದೆ ಬರಬಹುದು.

**ತೆರಿಗೆದಾರರ ಪಾಲಿಗೆ ಇದು ದೊಡ್ಡ ಹೊರೆ**

ಸರ್ಕಾರದ ಖಜಾನೆಗೆ ಒಂದಷ್ಟು ಹಣ ಹರಿದುಬರಲಿದೆ. ಒಂದು ವೇಳೆ ಕಾನೂನು ಪ್ರಕ್ರಿಯೆ ಮುಂದುವರೆದರೆ ಇಷ್ಟು ಪ್ರಮಾಣದ ಪ್ರಕರಣಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುವುದು, ವಕೀಲರ ತಂಡ ಇಡುವುದು ಸರ್ಕಾರಕ್ಕೆ ಕಷ್ಟವಾಗಲಿದೆ. ಹೈಕೋರ್ಟ್ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಯಾವಾಗ ಮುಗಿಯುತ್ತೆ ಎಂಬುದು ಗೊತ್ತಿಲ್ಲ. ಮುಗಿದರೂ ಮುಂದೆ ನಮಗೆ ಉಳಿಯುವುದೇನು? ಎಂಬ ಬಗ್ಗೆಯೂ ಖಚಿತತೆ ಇಲ್ಲ ಎಂದು ಸದನಕ್ಕೆ ಮಾಹಿತಿ ನೀಡಿದರು. ತೆರಿಗೆದಾರರು ಜಿಎಸ್‌ಟಿ ಟ್ರಿಬ್ಯೂನಲ್‌ನಲ್ಲಿ ಪ್ರಕರಣ ದಾಖಲಿಸುವಾಗ ಭದ್ರತಾ ಠೇವಣಿ ರೂಪದಲ್ಲಿ ರೂ.50 ಕೋಟಿ ಹಣ ಠೇವಣಿ ಇಡಬೇಕು. ತೆರಿಗೆದಾರರ ಪಾಲಿಗೆ ಇದು ದೊಡ್ಡ ಹೊರೆ. ಹೀಗಾಗಿ ಈ ಪ್ರಮಾಣವನ್ನು ರೂ.20 ಕೋಟಿಗೆ ಇಳಿಸಬೇಕು ಎಂದು ಹಲವು ವ್ಯವಹಾರಸ್ಥರು ನನ್ನ ಬಳಿ ಕೇಳಿಕೊಂಡಿದ್ದರು. ಅದರಂತೆ ಇದೀಗ ಭದ್ರತಾ ಠೇವಣಿ ಹಣವನ್ನು ರೂ.20 ಕೋಟಿ ರೂಪಾಯಿಗೆ ಉಳಿಸಲಾಗಿದೆ. ಇಲ್ಲದಿದ್ದರೆ,ತೆರಿಗೆದಾರರು ಸುಪ್ರೀಂ ಕೋರ್ಟ್‌ಗೆ ಹೋಗ್ತಾರೆ. ಇದರಿಂದ ಸರ್ಕಾರಕ್ಕೂ ಕಷ್ಟ, ತೆರಿಗೆದಾರರಿಗೂ ಕಷ್ಟ ಎಂದು ವಿವರಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹7,800/Gram24ct ₹7,150/Gram22ct ಬೆಳ್ಳಿ: ₹92.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಮಂದಿರಗಳ ಮೇಲೆ ಮುಸ್ಲಿಮರ ದಾಳಿ

ಎರಡನೆಯದಾಗಿ ಜಮ್ಮು, ಕಾಶ್ಮೀರದ ಮಾರ್ತಂಡ ದೇವಾಲಯ. ಮಾರ್ತಂಡ ಎಂದರೆ ಸೂರ್ಯ. ಭಾರತದ ಮೂರು ಪ್ರಸಿದ್ಧ, ಪ್ರಾಚೀನ ಸೂರ್ಯ ದೇವಾಲಯ ಗಳಲ್ಲಿ ಇದೂ ಒಂದು. ಇದು ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪ್ರಸ್ಥಭೂಮಿಯಲ್ಲಿದೆ. ಕ್ರಿಸ್ತಶಕ 8ನೇ ಶತಮಾನದಲ್ಲಿ ರಾಜಾ ಲಲಿತಾದಿತ್ಯನು ಈ ದೇವಾಲಯದ ನಿರ್ಮಾಣವನ್ನು ಪೂರ್ಣಗೊಳಿಸಿದನು. ಗಾಂಧಾರನ್, ಗುಪ್ತ, ಚೀನೀ ಶೈಲಿಯ ಸುಂದರ ವಾಸ್ತುಶಿಲ್ಪದ ಈ ಬೃಹನ್ಮಂದಿರ 84 ಸಣ್ಣ ದೇವಾಲಯಗಳನ್ನೊಳಗೊಂಡಿದ್ದು ಇದರ ಪ್ರಾಂಗಣ 220 ಅಡಿ ಉದ್ದ 142 ಅಡಿ ಅಗಲವಿದೆ. ಇಲ್ಲಿಂದ ಕಾಶ್ಮೀರದ ಕಣಿವೆಗಳನ್ನು ಸಂಪೂರ್ಣ ವೀಕ್ಷಿಸಬಹುದು. ಜೋನರಾಜ (1430) ಮತ್ತು ಹಸನ್ ಅಲಿ ಪ್ರಕಾರ , ಸೂಫಿ ಬೋಧಕ ಮೀರ್ ಮುಹಮ್ಮದ್ ಹಮದನಿ ಅವರ ಸಲಹೆಯ ಮೇರೆಗೆ ಸಮಾಜವನ್ನು ಇಸ್ಲಾಮೀಕರಣಗೊಳಿಸುವ ಉತ್ಸಾಹದಲ್ಲಿ ಮುಸ್ಲಿಂ ಆಡಳಿತಗಾರ ಸಿಕಂದರ್ ಶಾ ಮಿರಿ (1389–1413) ಈ ದೇವಾಲಯವನ್ನು ನಾಶಪಡಿಸಿದನು. ಭಗ್ನಾವಶೇಷಗಳನ್ನೊಳಗೊಂಡಕೇಂದ್ರ ದೇವಾಲಯ ಇಂದಿಗೂ ಇದ್ದು ಮುಸ್ಲಿಮರು ಇದನ್ನು ಶೈತಾನ್ ಕಿ ಗುಫಾ ಎನ್ನುತ್ತಿದ್ದರು. ಸುದೈವವಶಾತ್ ಮಾರ್ಚ್ 2024 ರಲ್ಲಿ, ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಈ ದೇವಾಲಯವನ್ನು ಪುನಃಸ್ಥಾಪಿಸಲು ಪ್ರಯತ್ನಗಳನ್ನು ಪ್ರಾರಂಭಿಸಿದೆ.

## ಪ್ರದೇಶಗಳ ಸಿಎ ನಿವೇಶನ ಹಂಚಿಕೆ ಮಹತ್ವದ ಅಪ್ಡೇಟ್ ಕೊಟ್ಟ ಎಂ.ಬಿ ಪಾಟೀಲ್

### ಎಸ್‌ಸಿ, ಎಸ್ಟಿ ಸಮುದಾಯಗಳ ಅರ್ಹರಿಗೂ ಅವಕಾಶ ಸಿಗಬೇಕೆಂದು ಮೀಸಲಾತಿ ಕಡ್ಡಾಯಗೊಳಿಸಲಾಗಿದೆ

• ಉದಯವಾಹಿನಿ ಬೆಂಗಳೂರು

ಕೈಗಾರಿಕಾ ಪ್ರದೇಶಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ಉದ್ದೇಶಗಳಿಗೆಂದು ಮೀಸಲಿಟ್ಟಿರುವ ಸಿ.ಎ. ನಿವೇಶನಗಳನ್ನು ಪಾರದರ್ಶಕವಾಗಿ ಮತ್ತು ನಿಯಮಗಳಿಗೆ ಅನುಸಾರವಾಗಿ ಹಂಚಲಾಗುತ್ತಿದೆ. ಜೊತೆಗೆ ಇದರಲ್ಲಿ ಎಸ್‌ಸಿ, ಎಸ್ಟಿ ಸಮುದಾಯಗಳ ಅರ್ಹರಿಗೂ ಅವಕಾಶ ಸಿಗಬೇಕೆಂದು ಮೀಸಲಾತಿ ಕಡ್ಡಾಯಗೊಳಿಸಲಾಗಿದೆ. ಇದರಲ್ಲಿ ಸ್ವಜನ ಪಕ್ಷಪಾತವಾಗಲಿ, ಅಕ್ರಮವಾಗಲಿ ನಡೆದಿಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದರು. ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಕಲಾಪ ವೇಳೆ ಬಿಜೆಪಿ ಮಾಜಿ ಸಚಿವ ಸಿ.ಟಿ.ರವಿ ಅವರು ಕೇಳಿದ ಪ್ರಶ್ನೆಗೆ ಕೈಗಾರಿಕ ಸಚಿವರು ಉತ್ತರಿಸಿದರು.

ಕೈಗಾರಿಕಾ ಪ್ರದೇಶಗಳಲ್ಲಿ ಶಾಲೆ, ಆಸ್ಪತ್ರೆ, ವಸತಿ ಸಮುಚ್ಚಯಗಳು, ಬ್ಯಾಂಕು, ಪೆಟ್ರೋಲ್ ಬಂಕ್, ಕ್ಯಾಂಟೀನ್, ಸಮುದಾಯ ಭವನ, ಆರ್. ಆಂಡ್ ಡಿ ಮತ್ತು ನಾವೀನ್ಯತಾ ಕೇಂದ್ರಗಳು ಇತ್ಯಾದಿ ಉದ್ದೇಶಗಳಿಗೆಂದು ಸಿ.ಎ. ನಿವೇಶನಗಳನ್ನು ಇಟ್ಟುಕೊಳ್ಳಲಾಗಿದೆ. ಹೋಟೆಲ್‌ಗಳು ಸಹ ಇದರಡಿಯಲ್ಲಿಯೇ ಬರುತ್ತವೆ. ಆದರೆ, ಒಬ್ಬರಿಗೆ ಒಂದೇ ಸಿ.ಎ. ನಿವೇಶನವನ್ನು ಮಾತ್ರ ಕೊಡಬೇಕೆಂಬ ನಿರ್ಬಂಧ ಕೂಡ ಇಲ್ಲ, ಅರ್ಹ ಸಂಸ್ಥೆಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಗುತ್ತದೆ ಎಂದು ಸಚಿವರು ಸ್ಪಷ್ಟಪಡಿಸಿದರು ಕೈಗಾರಿಕೆ ಪ್ರದೇಶಗಳಲ್ಲಿನ ಸಿಎ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಸರಿಯಾಗಿ ಜಾಹೀರಾತು ನೀಡಿಲ್ಲ ಎನ್ನುವ ಸಿ.ಟಿ.ರವಿ ಅವರ ಆಕ್ಷೇಪಣೆಗೆ ಸಚಿವರು ಉತ್ತರಿಸಿದರು.



ಉದಯವಾಹಿನಿ ಚಿತ್ರ

**ಒಟ್ಟು 93 ಕಡೆಗೆ ಜಾಹೀರಾತು**

> **ಮಧ್ಯವರ್ತಿಗಳು, ಜಿಪಿಎ ಹೊಂದಿರುವವರಿಗೆ ಹಣ ವರ್ಗಾಯಿಸುವ ವ್ಯವಸ್ಥೆ ಇಲ್ಲ. ನಿಯಮಗಳ ಪ್ರಕಾರ ರೈತರು ಮತ್ತು ಉದ್ಯಮಿಗಳ ಜಂಟಿ ಸಹಭಾಗಿತ್ವಕ್ಕೆ ಅವಕಾಶವಿಲ್ಲ. ಪರಿಹಾರ ಬೇಡ ಎನ್ನುವವರಿಗೆ ಅಭಿವೃದ್ಧಿಪಡಿಸಿದ ನಿವೇಶನ ನೀಡುವುದಕ್ಕೆ ನಿಯಮಗಳಲ್ಲಿ ಅವಕಾಶ ಇದೆ ಎಂದು ತಿಳಿಸಿದರು.**

ಮುಖ್ಯ ವಾಹಿನಿಯ ರಾಜ್ಯ ಪತ್ರಿಕೆಗಳ ಜತೆಗೆ ನಾನು ಸಚಿವನಾದ ಮೇಲೆ ಆನ್ ಲೈನ್ ಮೂಲಕವೂ ಜಾಹೀರಾತು ನೀಡುವ ವ್ಯವಸ್ಥೆ ಜಾರಿಗೊಳಿಸಿದ್ದೇವೆ. ಒಟ್ಟು 93 ಕಡೆಗೆ ಜಾಹೀರಾತು ನೀಡಲಾಗಿತ್ತು. 42 ಸಿ.ಎ. ನಿವೇಶನಗಳಿಗೆ ಒಂದೊಂದೇ ಅರ್ಜಿ ಬಂದಿದ್ದವು. ಇವುಗಳನ್ನು ತಿರಸ್ಕರಿಸಲಾಗಿದೆ. ಎರಡು ಸಿ.ಎ. ನಿವೇಶನಗಳನ್ನು ಉದ್ಯಮಿಗಳು ರಾಜ್ಯ ಸಕಾರಕ್ಕೆ ಹಿಂತಿರುಗಿಸಿದ್ದಾರೆ. ಇನ್ನೂ 39 ನಿವೇಶನಗಳು ಹಾಗೆಯೇ ಉಳಿದಿವೆ ಎಂದರು ಲೆಕ್ಕ ಕೊಟ್ಟರು. ಹಿಂದೆಲ್ಲ ಕೈಗಾರಿಕಾ ಸಚಿವರೇ ಈ ನಿವೇಶನಗಳ ಹಂಚಿಕೆ ಸಂಬಂಧ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿದ್ದರು.

> **ಹಿಂದಿನ ಬಿಜೆಪಿ ಸರ್ಕಾರವು ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕಿಗೆ ಸೇರಿದ ಜಾಗದಲ್ಲಿ ಒಂದು ಶಿಕ್ಷಣ ಸಂಸ್ಥೆಗೆ ಜಮೀನು ಕೊಟ್ಟಿದ್ದರಿಂದ ಬೊಕ್ಕಸಕ್ಕೆ 135 ಕೋಟಿ ರೂ. ನಷ್ಟವಾಗಿದೆ. ಇಂತಹ ಹಂಚಿಕೆಗಳಲ್ಲಿ ಪ್ರತಿಪಕ್ಷದವರು ರಾಜಕೀಯ ಮಾಡಲು ನೋಡಿದರೆ, ನಮಗೂ ರಾಜಕೀಯ ಮಾಡಲು ಬರುತ್ತದೆ ಎಂದು ಅವರು ತಿರುಗೇಟು ನೀಡಿದರು.**

ಆದರೆ, ನಾನು ಸಚಿವನಾಗಿ ಬಂದ ಮೇಲೆ ಇದಕ್ಕಾಗಿ ಕೆಐಎಡಿಬಿ ಸಿಇಒ ನೇತೃತ್ವದ ಉನ್ನತ ಸಮಿತಿಯನ್ನು ರಚಿಸಿದ್ದೇನೆ. ಒಟ್ಟು 95 ಎಕರೆಯಷ್ಟು ಜಾಗದಲ್ಲಿ ಇನ್ನೂ 152 ನಿವೇಶನಗಳಿವೆ. ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಕೈಗಾರಿಕೋದ್ದೇಶಕ್ಕೆ ಜಮೀನನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಆಯಾ ಪ್ರದೇಶದ ಮಾರ್ಗಸೂಚಿ ಬೆಲೆ ಆಧರಿಸಿ ರೈತರಿಗೆ ಆರ್ ಟಿಜಿಎಸ್ ಮೂಲಕ ನೇರವಾಗಿ ಪರಿಹಾರ ಪಾವತಿಸಲಾಗುತ್ತಿದೆ.

### ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ

• ಉದಯವಾಹಿನಿ ಬೆಂಗಳೂರು




ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಡಿಸೆಂಬರ್ 19, ಗುರುವಾರ ಸಂಜೆ 5–30ಕ್ಕೆ ವಿದುಷಿ ಕಾವ್ಯ ರಾವ್ ಅವರು ಹೇಮಾದ್ರಿ ಸ್ಟುಡಿಯೋಸ್ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದರು. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು–41

### ಪಡಿತರ ವಿತರಕರ ಈ ಕೆ ವೈ ಸಿ, ಕಮಿಷನ್ ಹಣ ಬಿಡುಗಡೆ ಮಾಡುವಂತೆ ಮನವಿ

• ಉದಯವಾಹಿನಿ ಬೆಂಗಳೂರು

ಸುಮಾರು ವರ್ಷಗಳಿಂದಲೂ ಸಹ ಪಡಿತರ ವಿತರಕರ ಈ ಕೆ ವೈ ಸಿ ಹಣ ಬಾಕಿ ಇದ್ದು ಇದಲ್ಲದೆ ಪ್ರತಿ ತಿಂಗಳು ಪಡಿತರ ವಿತರಕರ ಕಮಿಷನ್ ಸರ್ಕಾರದಿಂದ ಬಿಡುಗಡೆಗೊಳ್ಳುತ್ತಿರುವುದು ವಿಳಂಬವಾಗುತ್ತಿದೆ ಇದಕ್ಕಾಗಿ ಸೂಕ್ತ ಕ್ರಮ ಕೈಗೊಂಡು ಕೂಡಲೇ ಹಣ ಬಿಡುಗಡೆ ಮಾಡುವಂತೆ ಆಹಾರ ಇಲಾಖೆ ಸರ್ಕಾರದ ಅಧೀನ ಕಾರ್ಯ ದರ್ಶಿ ಯವರನ್ನು ಭೇಟಿ ಮಾಡಿ ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಮತ್ತು ರಾಷ್ಟ್ರೀಯ ಕಾರ್ಯಾಧ್ಯಕ್ಷ ಮನವಿ ಮಾಡಿದರು

ಅಲ್ಲದೆ ಪಡಿತರ ವಿತರಣೆಗೆ ಓಟಿಪಿಯನ್ನು ನಿಲ್ಲಿಸಲಾಗಿದ್ದು ಬೆರಳಚ್ಚು ಮುಖಾಂತರ ವಿತರಣೆಯಾಗುತ್ತಿದ್ದು ವಯಸ್ಸಾದವರು ಮತ್ತು ಹಲವು ಅಂಗವಿಕಲರ ಬೆರಳಚ್ಚು ಬರದೆ ಪಡಿತರ ವಿತರಣೆಗೆ ಅಡ್ಡಿಯಾಗುತ್ತಿದೆ ಇದಕ್ಕಾಗಿ ಓಟಿಪಿ ಮುಖಾಂತರ ಪಡಿತರ ವಿತರಣೆ ವಿತರಣೆ ಮಾಡಲು.


ಉದಯವಾಹಿನಿ ಚಿತ್ರ

**ಅವಕಾಶ ಕಲ್ಪಿಸಬೇಕೆಂದು ಸಹ ಕೃಷ್ಣಪ್ಪ ಮನವಿ**

ಅವಕಾಶ ಕಲ್ಪಿಸಬೇಕೆಂದು ಸಹ ಕೃಷ್ಣಪ್ಪ ಮನವಿ ಮಾಡಿದ್ದಾರೆ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಆಹಾರ ಇಲಾಖೆ ಅಧೀನ ಕಾರ್ಯದರ್ಶಿಗಳು ಮತ್ತು ಕೆ ಎಸ್ ಡಿ ಸಿ ಮುಖ್ಯಸ್ಥರಾದ ಚಂದ್ರಕಾಂತ್ ರವರು ಆಹಾರ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಕೂಡಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ರಾಜ್ಯಾದ್ಯಕ್ಷ ಕೃಷ್ಣಪ್ಪ ಮತ್ತು ರಾಜ್ಯ ಪದಾಧಿಕಾರಿಗಳಿಗೆ ಭರವಸೆ ನೀಡಿದ್ದಾರೆಂದು ತಿಳಿಸಲಾಗಿದೆ ಖಜಾಂಚಿ ಟಿಆರ್ ಭಾಸ್ಕರ್.

ನಗರ ಕಾರ್ಯದರ್ಶಿ ನಾಗರಾಜು. ಮತ್ತು ಪಾವಗಡ ತಾಲ್ಲೂಕ ಅಧ್ಯಕ್ಷರಾದ ನಾಗರಾಜು. ಉಪಸ್ಥಿತರಿದ್ದರು

### ಬೆಂಗಳೂರಿನಲ್ಲಿ ಹೊಸ ವರ್ಷಕ್ಕೂ ಮುನ್ನ ಡ್ರಗ್ಸ್ ದಂಧೆ

• ಉದಯವಾಹಿನಿ ಬೆಂಗಳೂರು



ಬೆಂಗಳೂರಿನಲ್ಲಿ ಹೊಸ ವರ್ಷ ಆರಂಭವಾಗುತ್ತಿದ್ದಂತೆ ಡ್ರಗ್ಸ್ ದಂಧೆ ಸದ್ದಿಲ್ಲದೆ ಶುರುವಾಗಿಬಿಡುತ್ತದೆ. ಇದಕ್ಕೆ ಸಾಕ್ಷಿ ಎಂಬಂತೆ ಬೆಂಗಳೂರು ಪೊಲೀಸರು ಅತಿ ದೊಡ್ಡ ಡ್ರಗ್ಸ್ ಮಾರಾಟ ಜಾಲವನ್ನು ಪತ್ತೆ ಮಾಡಿದ್ದಾರೆ. ಜೊತೆಗೆ ನೈಜೀರಿಯಾ ಮೂಲದ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ. ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಮಾದಕ ದ್ರವ್ಯ ನಿಗ್ರಹ ದಳ ಹಾಗೂ ಕೆಆರ್ ಪುರ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ 24 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಲಾಗಿದೆ.

12 ಕೆಜಿ ನಿಷೇಧಿತ ಶುದ್ಧ ಎಂಡಿಎಂಎ ಕ್ರಿಸ್ಟಲ್ ವಶ ಪಡಿಸಿಕೊಳ್ಳಲಾಗಿದ್ದು, ಇದು ರಾಜ್ಯದಲ್ಲಿ ಇದುವರೆಗಿನ ಅತಿ ಹೆಚ್ಚು ಮಾದಕ ವಸ್ತು ವಶವಾಗಿರುವ ಪ್ರಕರಣ ಎಂದು ಪೊಲೀಸರು ತಿಳಿಸಿದ್ದಾರೆ. ಇನ್ನಷ್ಟು ತಿಳಿಯಿರಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 40 ವರ್ಷದ ನೈಜೀರಿಯಾ ಮೂಲದ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನ ಟಿಸಿ ಪಾಳ್ಯದಲ್ಲಿ ತಂಗಿದ್ದ ಈ ಮಹಿಳೆಯನ್ನು ಪೊಲೀಸರು ಖಚಿತ ಮಾಹಿತಿ ಮೇರೆಗೆ ಅರೆಸ್ಟ್ ಮಾಡಿದ್ದಾರೆ. ಈ ಮಹಿಳೆ ಬಳಿ ಅತೀ ಹೆಚ್ಚು ಮೌಲ್ಯದ ಮಾದಕವಸ್ತುಗಳು ಪತ್ತೆಯಾಗಿದ್ದು, ಇದು ನಗರದಲ್ಲಿ ಹಿಂದೆಂದು ಪತ್ತೆಯಾಗದ ಮಾದಕವಸ್ತು ಎಂದು ಪೊಲೀಸರು ತಿಳಿಸಿದ್ದಾರೆ. ಇದೇ ವೇಳೆ ಮತ್ತೋರ್ವ ವಿದೇಶಿ ಮಹಿಳೆ ತಲೆಮರೆಸಿಕೊಂಡಿದ್ದು ಆಕೆಯ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ ಮಾಹಿತಿ ನೀಡಿದ್ದಾರೆ.

### ಕಾಂಗ್ರೆಸ್‌ನಲ್ಲಿ ಹೆಚ್ಚಾಯ್ತು ಅಧಿಕಾರ ಹಂಚಿಕೆ ಕಿರಿಕ್ - ರಾಜ್ಯಕ್ಕೆ ಕೆಸಿ ವೇಣು ಗೋಪಾಲ್ ಭೇಟಿ

• ಉದಯವಾಹಿನಿ ಬೆಂಗಳೂರು

ಬೆಂಗಳೂರಿನಲ್ಲಿ ಅಧಿಕಾರ ಹಂಚಿಕೆ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಸ್ಫೋಟಕ ಹೇಳಿಕೆಗೆ ಕಾಂಗ್ರೆಸ್ ಹೈಕಮಾಂಡ್ ತಲೆ ಕೆಡಿಸಿಕೊಂಡಿದ್ದು, ಇದೀಗ ರಾಜ್ಯಕ್ಕೆ ಕೆ.ಸಿ ವೇಣುಗೋಪಾಲ್ ಭೇಟಿ ನೀಡಲಿದ್ದಾರೆ. ಈ ಹಿಂದೆ ಡಿಸಿಎಂ ಡಿಕೆ ಶಿವಕುಮಾರ್ ವಿಧಾನ ಸೌಧದಲ್ಲಿ ಅಧಿಕಾರ ಕೊಡದಿದ್ದರೆ ಒದ್ದು ಕಿತ್ತುಕೊಳ್ಳಬೇಕು, ಕಾಲ ಬಂದಾಗ ಉತ್ತರ ಕೊಡುತ್ತೇನೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದರು, ಈ ಸಂಬಂಧ ಡಿಸಿಎಂ ಹೇಳಿಕೆಯಿಂದಾಗಿ ಸಿಎಂ ಸಿದ್ದರಾಮಯ್ಯಗೆ ಭಾರಿ ಮುಜುಗರ ಆಗಿದೆ ಎನ್ನಲಾಗಿದೆ. ಅಲ್ಲದೇ ಅಧಿಕಾರ ಹಂಚಿಕೆಯ ಬಗ್ಗೆ ಪದೆ ಪದೇ ಡಿಸಿಎಂ ಬಹಿರಂಗವಾಗಿ ಹೇಳಿಕೆ ನೀಡುತ್ತಿರುವುದು ಸರಿಯಲ್ಲ ಇದರಿಂದ ಪಕ್ಷದಲ್ಲಿ ಭಿನ್ನಾಭಿಪ್ರಾಯ ಉಂಟಾಗುತ್ತಿದೆ ಎನ್ನುತ್ತಿರುವ ಕೆಲ ಶಾಸಕರು ಈ ಬಗ್ಗೆ ವಿಧಾನ ಸಭೆ ಕಲಾಪದಲ್ಲೂ ಮಾತನಾಡಿರುವುದು ಆಂತರಿಕ ಕಲಹಕ್ಕೆ ದಾರಿ ಮಾಡಿಕೊಡುತ್ತಿದೆ ಎನ್ನುತ್ತಿದ್ದಾರೆ ಉಪಮುಖ್ಯಮಂತ್ರಿಗಳ ಈ ಹೇಳಿಕೆಯಿಂದ ಸಿಎಂ ಸಿದ್ದರಾಮಯ್ಯಗೆ ಮುಜುಗರ ಆಗುತ್ತಿದೆ. ಹೀಗಾಗಿ ಸಿಎಂ ಆಪ್ತ ಬಳಗ ದೂರು ನೀಡುವ ಸಾಧ್ಯತೆ ಇದೆ. ಆ ಮೂಲಕ ಶಿವಕುಮಾರ್ ಅವರ ಬಹಿರಂಗ ಹೇಳಿಕೆಗೆ ಬ್ರೇಕ್ ಹಾಕಲು ಸಿದ್ದರಾಮಯ್ಯ ಬೆಂಬಲಿಗರು ಮುಂದಾಗಿದ್ದಾರೆ ಎಂದು ತಿಳಿದು ಬಂದಿದೆ.

### ರಾಜಕೀಯ ಪ್ರಭಾವಿ, ಕಂದಾಯ ಇಲಾಖೆ ಅಧಿಕಾರಿಗಳಿಂದ ಸರ್ಕಾರಿ ಸ್ವತ್ತು ಕಬಳಿಕೆ

• ಉದಯವಾಹಿನಿ ಬೆಂಗಳೂರು

ರಾಜಕೀಯ ಪ್ರಭಾವಿಗಳು ಮತ್ತು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿ ಒಟ್ಟು 1,600 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ ಸರ್ಕಾರಿ ಸ್ವತ್ತನ್ನು ಕಬಳಿಸಿದ್ದಾರೆ ಎಂದು ಬಿಜೆಪಿ ಮುಖಂಡ ಎನ್.ಆರ್ ರಮೇಶ್ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಕೆಂಗೇರಿಯಲ್ಲಿ 183 ಎಕರೆಗಳಷ್ಟು ಸರ್ಕಾರಿ ಸ್ವತ್ತು ಇದೆ.

ಈ ಪೈಕಿ ಬಹಳಷ್ಟು ಮಂದಿ ಈಗಾಗಲೇ ಮೃತಪಟ್ಟಿದ್ದಾರೆ ಎಂದರು. ಆದರೆ ಉತ್ತರಹಳ್ಳಿ – ಕೆಂಗೇರಿ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಹೊಂದಿಕೊಂಡಂತಿರುವ ಈ ಸ್ವತ್ತನ್ನು ಕಬಳಿಸಲು ಕೆಲವು ಪ್ರಭಾವಿಗಳು ಕಂದಾಯ ಇಲಾಖೆಯ ಅಧಿಕಾರಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಹುತೇಕ ಜಮೀನನ್ನು ಕಬಳಿಸಿದ್ದಾರೆ. ಈ ಎಲ್ಲಾ ಜಮೀನುಗಳು ಸರ್ಕಾರಿ ವಶದಲ್ಲಿದ್ದರೂ ರಾಜಕೀಯ ಪ್ರಭಾವಿಗಳು ಕೆ.ಎನ್ ಸುರೇಶ್ ಎಂಬಾತನ ನೆರವಿನಿಂದ ಕಬಳಿಸಿದ್ದಾರೆ. ಇದಕ್ಕೆ ಮಾಗಡಿ ಶಾಸಕ ಹೆಚ್‌ಸಿ ಬಾಲಕೃಷ್ಣ ಅವರ ಬೆಂಬಲವೂ ಇದೆ ಎಂದು ಆರೋಪಿಸಿದರು.

ಪ್ರಭಾವಿ ರಾಜಕಾರಣಿಗಳ ಪ್ರಭಾವಗಳಿಗೆ ಒಳಗಾಗಿದ್ದ ಬೆಂಗಳೂರು ನಗರ ಜಿಲ್ಲೆಯ ಸಹಾಯಕ ಉಪ ವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಮತ್ತು ವಿಶೇಷ ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂ ದಾಖಲೆಗಳ ಉಪ ನಿರ್ದೇಶಕ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಮೇಲ್ವಿಚಾರಕರು ಸೇರಿ ಸುಮಾರು 50 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತವನ್ನು ಲಂಚದ ರೂಪದಲ್ಲಿ ಪಡೆದಿದ್ದಾರೆ. ನಂತರ ಸುಮಾರು 1,300 ಕೋಟಿ ರೂ.ಗಳಿಗೂ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ 37.20 ಎಕರೆ ವಿಸ್ತೀರ್ಣದ ಸ್ವತ್ತನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಲು 25 ಜನರಿಗೆ ಮಾರಾಟಕ್ಕೆ ಅನುಮತಿ ಕೊಡಿಸುವಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ ಎಂದರು.


ಉದಯವಾಹಿನಿ ಚಿತ್ರ

**ಬಿಜೆಪಿ ಮುಖಂಡ ಆರೋಪ**

> **ಸರ್ಕಾರಿ ಭೂ ಕಬಳಿಕೆ ಹಗರಣವನ್ನು ಸಿಐಡಿಗೆ ವಹಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಮತ್ತು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಗೆ ಮನವಿ ಮಾಡಿದ್ದೇನೆ. ಜೊತೆಗೆ ಈ ಸಂಬಂಧ ಲೋಕಾಯುಕ್ತ ADGP, ಲೋಕಾಯುಕ್ತ IGP ಮತ್ತು ಲೋಕಾಯುಕ್ತ SP -2 ರವರಿಗೂ ಸಹ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದರು.**

> **ಘಟನೆ ಹಿನ್ನೆಲೆಯಲ್ಲಿ ಸರ್ಕಾರಿ ಸ್ವತ್ತನ್ನು ಕಬಳಿಸಲು ಷಾಮಿಲರಾದ ಬೆಂಗಳೂರು ನಗರ ಜಿಲ್ಲೆಯ AC ರಜನೀಕಾಂತ್, DDLR ಗಳಾದ ಮಂಜುನಾಥ್ ಥವನೆ ಮತ್ತು ಕುಸುಮ ಲತಾ, ADLR ಸಚಿನ್, Supervisor ಶಶಿಕುಮಾರ್, Surveyor ಗಳಾದ ರವಿಶಂಕರ್ ಮತ್ತು ಲಕ್ಷ್ಮೀದೇವಿ, ವಿಶೇಷ ತಹಸೀಲ್ದಾರ್ ಗುರುರಾಜ್ ಹಾಗೂ ತಹಸೀಲ್ದಾರ್‌ಗಳಾದ ದಿನೇಶ್ ಮತ್ತು ರಾಮ್ ಲಕ್ಷ್ಮಣ್ ಹಾಗೂ KNS Residency ಸಂಸ್ಥೆಯ ಮಾಲೀಕ ಎ. ಓ. ಸುರೇಂದ್ರ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು.**

### ದರ್ಶನ್ ಬೇಲ್ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ

• ಉದಯವಾಹಿನಿ ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳಾದ ನಟ ದರ್ಶನ್, ಪವಿತ್ರಾಗೌಡ ಸೇರಿ ಎಲ್ಲಾ ಆರೋಪಿಗಳಿಗೆ ಭಾರೀ ಸಂಕಷ್ಟ ಎದುರಾಗಿದೆ. ಹೈಕೋರ್ಟ್‌ನಿಂದ ನಿಯಮಿತ ಜಾಮೀನು ಪಡೆದುಕೊಂಡಿರುವ ಆರೋಪಿಗಳ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಪೊಲೀಸರು ನಿರ್ಧರಿಸಿದ್ದಾರೆ. ಈ ಕುರಿತು ಸ್ಪಷ್ಟನೆ ನೀಡಿರುವ ಬೆಂಗಳೂರು ಕಮೀಷನರ್ ಬಿ.ದಯಾನಂದ್ ಅವರು, ಆರೋಪಿಗಳಿಗೆ ದೊರಕಿರುವ ಜಾಮೀನು ಸಂಬಂಧಿಸಿ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಪ್ರಯತ್ನ ನಡೆದಿದೆ. ಈ ಕುರಿತಾಗಿ ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಎಂದಿದ್ದಾರೆ. ಇನ್ನು ಪ್ರಕರಣದಲ್ಲಿ ಗೂಂಡಾ ಕಾಯ್ದೆ ಜಾರಿ ಮಾಡುವ ಪ್ಲಾನ್ ಇಲ್ಲ ಎಂದೂ ಹೇಳಿದ್ದಾರೆ. ಈಗಾಗಲೇ ಕಮೀಷನರ್ ಅವರು ಗೃಹ ಇಲಾಖೆಗೆ ಪತ್ರ ಬರೆಯಲು ಸಿದ್ಧತೆ ಮಾಡಿಕೊಳ್ಳುವಂತೆ ಡಿಸಿಪಿ ಗಿರೀಶ್, ತನಿಖಾಧಿಕಾರಿ ಚಂದನ್ ಅವರಿಗೆ ಸೂಚಿಸಿದ್ದಾರೆ.

### ರಾಜಕೀಯ ಅನುದಾನ ನೀಡಲು ಸಿಎಂ ನಿರ್ಧಾರ

• ಉದಯವಾಹಿನಿ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ರಸ್ತೆ ಅಭಿವೃದ್ಧಿಗಾಗಿ ಪ್ರತಿ ಶಾಸಕರ ಕ್ಷೇತ್ರಕ್ಕೆ 10 ಕೋಟಿ ರೂಪಾಯಿ ಅನುದಾನ ನೀಡಲು ನಿರ್ಧರಿಸಿದ್ದಾರೆ.
ರಾಜ್ಯದ ಗ್ರಾಮಾಂತರ ಪ್ರದೇಶಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುವ ಸಂಬಂಧ ಸಿಎಂ ಅವರು ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಈ ಬಗ್ಗೆ ತೀರ್ಮಾನಿಸಿದ್ದಾರೆ. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಅಧಿವೇಶನದ ಸದನದಲ್ಲೇ ಸಿಎಂ ಅನುದಾನವನ್ನು ಘೋಷಣೆ ಮಾಡಲಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರವು ತನ್ನ ಪಂಚ ಗ್ಯಾರಂಟಿ ಯೋಜನೆಗಳನ್ನು ಸರಿದೂಗಿಸಲು ಸೂಕ್ತವಾಗಿ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ನೀಡುತ್ತಿಲ್ಲ ಎಂದು ಈಗಾಗಲೇ ವಿರೋಧ ಪಕ್ಷದ ನಾಯಕರು ಆರೋಪಿಸಿದ್ದು ಗೊತ್ತೇ ಇದೆ. ಇದಲ್ಲದೇ ಆಡಳಿತರೂಢ ಶಾಸಕರೂ ತಮ್ಮ ಕ್ಷೇತ್ರಗಳಿಗೆ ಸರಿಯಾಗಿ ಅನುದಾನ ಸಿಗುತ್ತಿಲ್ಲ. ಇದಕ್ಕೆ ಗ್ಯಾರಂಟಿ ಯೋಜನೆಗಳ ಹೊರೆ ಎಂಬಂತೆ ಹೇಳಿಕೆಗಳನ್ನು ನೀಡಿದ್ದರು. ಈ ನಿಟ್ಟಿನಲ್ಲಿ ಎಲ್ಲಾ ಅಪವಾದ, ಆರೋಪಗಳಿಗೆ ಉತ್ತರ ನೀಡಲು ಸಿಎಂ ನಿರ್ಧರಿಸಿದ್ದು, ಇಂದಿನ ಕಲಾಪದಲ್ಲೇ ಅನುದಾನ ಘೋಷಿಸಲು ನಿರ್ಧಾರ ಮಾಡಿದ್ದಾರೆಂಬ ಮಾಹಿತಿ ಲಭ್ಯವಾಗಿದೆ. ಇನ್ನು ನೂತನವಾಗಿ ಆಯ್ಕೆಯಾಗಿರುವ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ವಿಶೇಷ ಅನುದಾನ ನೀಡಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಎಲ್ಲಾ ಬಿಜೆಪಿ ಶಾಸಕರು ಸಹಿ ಮಾಡುವ ಮೂಲಕ ಪತ್ರ ಬರೆದಿದ್ದಾರೆ.


ಉದಯವಾಹಿನಿ ಚಿತ್ರ

### ಜಾಮೀನು ಸಿಗುತ್ತಿದ್ದಂತೆ ದರ್ಶನ್ ಬಗ್ಗೆ ಮೌನ ಮುರಿದ ಕಿಚ್ಚ ಸುದೀಪ್

• ಉದಯವಾಹಿನಿ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಮಧ್ಯಂತರ ಜಾಮೀನು ಪಡೆದು ಆಸ್ಪತ್ರೆ ಸೇರಿದ್ದ ದರ್ಶನ್‌ಗೆ ರೆಗ್ಯೂಲರ್ ಜಾಮೀನು ನಿಟ್ಟುಸಿರು ಬಿಡುವಂತೆ ಮಾಡಿದೆ.

ನಟ ದರ್ಶನ್ ಗೆ ಜಾಮೀನು ಸಿಕ್ಕ ಬೆನ್ನಲ್ಲೇ ಅಭಿಮಾನಿಗಳು ಸಂತಸಗೊಂಡಿದ್ದು, ನಟ ದರ್ಶನ್ ಕುರಿತು ನಟ ಕಿಚ್ಚ ಸುದೀಪ್ ಕೊನೆಗೂ ಮೌನ ಮುರಿದಿದ್ದಾರೆ. ಖಾಸಗಿ ಸುದ್ದಿವಾಹಿನಿಯ ಸಂದರ್ಶನದಲ್ಲಿ ನಟ ಸುದೀಪ್ ಅವರು ನಟ ದರ್ಶನ್ ಅವರಿಗೆ ಜಾಮೀನು ಸಿಕ್ಕ ವಿಚಾರವಾಗಿ ಮಾತನಾಡಿ, ನಾನು ಅವತ್ತು ಹೇಳಿದ್ದೆ, ಇವತ್ತು ಹೇಳಿದಿನಿ. ನಾವು ಕಾನೂನು ಅಲ್ಲ. ಕಾನೂನಿಗೆ ಅದರದ್ದೆ ಆದ ರೀತಿ ನೀತಿ ಇದೆ. ಅವತ್ತು ನಾವು ಪ್ರಶ್ನೆ ಮಾಡೋಕೆ ಆಗ್ಲಿಲ್ಲ. ಇವತ್ತು ನಾವು ಪ್ರಶ್ನೆ ಮಾಡಬಾರದು. ಅವರ ಜೀವನದಲ್ಲಿ ನಾವು ಭಾಗಿಯೇ ಆಗಿಲ್ಲ, ಏನು ನಡೀತು ನನಗೆ ಗೊತ್ತಿಲ್ಲ. ವತ್ತು ನಾನು ಒಂದು ಮಾತು ಹೇಳಿದ್ದ. ಜವಾಬ್ದಾರಿಗಳು ಅಂತ ಬಂದಾಗ ಎಲ್ಲಿ ಏನೇನ್ ನಡೆಯಬೇಕೋ ಅದು ನಡೆಯಲೇ ಬೇಕು. ನಾನು ಅವತ್ತೆ ಹೇಳಿದ್ದೆ. ಫ್ಯಾನ್ಸ್ ಕೂಗಾಡೂವಾಗ ಬೈಬೇಡಿ ಅವರಿಗೆ ಏನ್ ಮಾತ್ನಾಡೇಕೋ ಅಂತ ಗೊತ್ತಾಗುತ್ತಿಲ್ಲ ಅದಕ್ಕಾಗಿ ಕೂಗಾಡ್ತಿದ್ದಾರೆ. ನಾವ್ಯಾರು ಕಾನೂನು ಅಲ್ಲ. ಸಂಕರ್ಪದಲ್ಲಿ ಇದ್ವಿ ಎಲ್ಲಾ ಗೊತ್ತಿದೆ ಅಂದ್ರೆ ಬೇರೆ ವಿಚಾರ. ಸಂಪರ್ಕ ತಪ್ಪಿ ತುಂಬಾ ಟೈಮ್ ಆಗಿದೆ. ಯಾರು ನಮ್ಮ ಕಲಾವಿದರು ಒಳಗೋಗಿ ಒದ್ದಾಡುತ್ತಿದ್ದಾರೆ ಅಂದ್ರೆ ತಪ್ಪು ಸರಿ ಸೆಕೆಂಡ್ರಿ. ಆದರೆ, ಖುಷಿ ಪಡುವವರು ನಾವಲ್ಲ ಈಗ ಜಾಮೀನು ಸಿಕ್ಕು ಹೊರಗಡೆ ಬಂದ್ರು, ಅಂತ ಅಯ್ಯೋ ಯಾಕೆ ಅಂತ ಕೇಳುವವರು ನಾವಲ್ಲ.


ಉದಯವಾಹಿನಿ ಚಿತ್ರ

> **ನನ್ನ ಜೀವನದ ಬಗ್ಗೆ ನನ್ನ ತಾಯಿ ಬಗ್ಗೆ, ನಾನು ಮಾತನಾಡಬಲ್ಲೆ. ಯಾಕೆಂದ್ರೆ ಆ ವಿಚಾರ ನನಗೆ ಎಲ್ಲಾ ಗೊತ್ತು. ನಾನು ಅಲ್ಲಿ ಇದಿನಿ, ನನಗೆ ಬೇರೆ ಎಲ್ಲಾ ನಿಮ್ಮಿಂದಲೇ ಗೊತ್ತಾಗುತ್ತಿರುವುದು. ಒಂದು ಚಾನೆಲ್ ಒಂದೊಂದ್ ತರ ಹೇಳುತ್ತೆ. ಇದರಿಂದ ಗೊಂದಲ ಆಗುತ್ತೆ. ಇದು ಮಾತನಾಡುವುದು ತಪ್ಪು ಮೊನ್ನೆ ಗೊತ್ತಾಯ್ತು ಬೇಲ್ ಸಿಕ್ಕು ಅಂತ. ಗುಡ್ ಸರ್ ಎಂದು ಕಿಚ್ಚ ಸುದೀಪ್ ಹೇಳಿದ್ದಾರೆ.**

### ನಿಲ್ಲದ ಬಣ ಬಡಿದಾಟ, ಯಡಿಯೂರಪ್ಪ ವಿಜಯೇಂದ್ರ ವಿರುದ್ಧ ಯತ್ನಾಳ್ ಮತ್ತೆ ಕಿಡಿ

• ಉದಯವಾಹಿನಿ ಬೆಂಗಳೂರು

ಬಿಜೆಪಿಯ ರೆಬಲ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಪಕ್ಷದ ನಾಯಕತ್ವ, ಯಡಿಯೂರಪ್ಪ ಅವರ ಕುಟುಂಬದ ವಿರುದ್ಧ ತೋರುವ ನಡೆ–ನುಡಿಯಿಂದ ಹೈಕಮಾಂಡ್ ಇತ್ತೀಚೆಗೆ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ನೀಡಿತ್ತು. ಬಣಬಡಿದಾಟ ಮಾಡದಂತೆ ಕಿವಿ ಕೂಡ ಹಿಂದಿತ್ತು. ಇದೀಗ ಯತ್ನಾಳ್ ಮತ್ತೊಮ್ಮೆ ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ಸಿಡಿದೆದ್ದಿದ್ದಾರೆ. ಬೆಳಗಾವಿ ಅಧಿವೇಶನದ ಮಧ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಆಯೋಜಿಸಿದ್ದ ಔತಣಕೂಟಕ್ಕೆ ಯತ್ನಾಳ್ ಹೋಗಿರಲಿಲ್ಲ. ಈ ಬಗ್ಗೆ ಯತ್ನಾಳ್ ಪ್ರತಿಕ್ರಿಯೆ ನೀಡಿದ್ದು, ಒಂದುಕಡೆ ಊಟಕ್ಕೆ ಕರೆಯುತ್ತಾರೆ, ಇನ್ನೊಂದೆಡೆ ಅವರ ಚೇಲಾಗಳನ್ನು ಬಿಟ್ಟು ದಾವಣಗೆರೆಯಲ್ಲಿ ನಮ್ಮ ವಿರುದ್ಧ ಮೀಟಿಂಗ್ ಮಾಡಿಸುತ್ತಾರೆ. ಹೀಗಾಗಿ ನಾನೂ ಊಟಕ್ಕೆ ಹೋಗಿಲ್ಲ, ರಮೇಶ್ ಜಾರಕಿಹೊಳಿ ಕೂಡ ಹೋಗಿಲ್ಲ ಎಂದು ಅಸಮಾಧಾನ ಹೊರ ಹಾಕಿದ್ದಾರೆ. ನನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡಿಸಬೇಕು ಎಂಬ ಕುತುಂತ್ರ ನಡೆಯುತ್ತಿದೆ, ಅದು ಸಾಧ್ಯವಿಲ್ಲ. ಇದೆಲ್ಲದರ ಹಿಂದೆ ಯಡಿಯೂರಪ್ಪ ಕುತಂತ್ರ ಯಾವಾಗಲೂ ಇರುತ್ತದೆ. ಊಟಕ್ಕೆ ಕರೆಯುವುದು, ಬೆನ್ನಿಗೆ ಚೂರಿ ಹಾಕುವುದು ಗೊತ್ತಿದೆ ಬಿಡಿ ಎಂದು ಬಹಿರಂಗವಾಗಿಯೇ ಯತ್ನಾಳ್ ಕಿಡಿಕಾರಿದ್ದಾರೆ.

## ನಮ್ಮ ಕೈಗೆ ದೊಣ್ಣೆ ಕೊಟ್ಟು ಹೊಡೆಸಿಕೊಳ್ಳುವುದರಲ್ಲೇ ಅತಿ ಪ್ರೀತಿ ಅನಿಸುತ್ತದೆ

### ಬಾಬಾ ಸಾಹೇಬರಿಗೆ ನೀಡಿದ ಜವಾಬ್ದಾರಿಯಿಂದಲೇ ಜಗತ್ತಿನ ಅತೀ ದೊಡ್ಡ ಸಂವಿಧಾನ ರಚಿಸಲು ಸಾಧ್ಯವಾಗಿದೆ

• ಉದಯವಾಹಿನಿ ಬೆಂಗಳೂರು

ಬಿಜೆಪಿ ಶಾಸಕರಿಗೆ ನಮ್ಮ ಕೈಗೇ ದೊಣ್ಣೆ ಕೊಟ್ಟು ಹೊಡೆಸಿಕೊಳ್ಳುವುದರಲ್ಲೇ ಅತಿ ಪ್ರೀತಿ ಅನಿಸುತ್ತದೆ ಎಂದು ಬಿಜೆಪಿ ಶಾಸಕ ಅರವಿಂದ್ ಬೆಲ್ಲದ ಅವರಿಗೆ ಬಿಕೆ ಹರಿಪ್ರಸಾದ್ ಅವರ ತಿರುಗೇಟು ನೀಡಿದ್ದಾರೆ. ಸ್ವಾಮಿ ಬೆಲ್ಲದ್ ಅವರೇ, ಇತಿಹಾಸದ ಗೊತ್ತು ಗುರಿ ಇಲ್ಲದೇ ಪೇಲವ ರೀತಿ ಯಾಕೆ ತೌಡು ಕುಟ್ಟುತ್ತೀರಿ. ದೇಶದ ಸಂವಿಧಾನ ರಚನೆಯ ಉದ್ದೇಶ, ದೂರದೃಷ್ಟಿ ಹಾಗೂ ಬಾಬಾ ಸಾಹೇಬರ ಶ್ರಮದ ಬಗ್ಗೆ ಎಳ್ಳಷ್ಟು ತಿಳಿವಳಿಕೆಯೂ ಇಲ್ಲದೆ ಇದ್ದರೆ ನಿಮ್ಮ ಕರ್ಮ, ಆದರೆ ಕನಿಷ್ಟ ಪಕ್ಷ ಸಂವಿಧಾನ ಹಾಗೂ ತುರ್ತುಪರಿಸ್ಥಿತಿಯ ಬಗ್ಗೆ ನಿಮ್ಮ ಪಕ್ಷ ಹಾಗೂ ನಿಮ್ಮ ನಾಯಕರ ನಿಲುವುಗಳ ಇತಿಹಾಸವನ್ನಾದರೂ ಓದಬಾರದೇ ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷ, ನೆಹರೂ ಅವರ ಮುತುವರ್ಜಿಯಲ್ಲೇ ಬಾಬಾ ಸಾಹೇಬರಿಗೆ ನೀಡಿದ ಜವಾಬ್ದಾರಿಯಿಂದಲೇ ಜಗತ್ತಿನ ಅತೀ ದೊಡ್ಡ ಸಂವಿಧಾನ ರಚಿಸಲು ಸಾಧ್ಯವಾಗಿದೆ. ಅದಕ್ಕೆ ನಡೆದ ಚರ್ಚೆಗಳು, ಸಂವಿಧಾನ ರಚನಾ ಸಮಿತಿಯ ನಡಾವಳಿಗಳು ಕನ್ನಡದಲ್ಲೇ ಪ್ರತಿ ಸಿಗುತ್ತದೆ ಸಾಧ್ಯವಾದ್ರೆ, ಓದುವ ಹವ್ಯಾಸವಾದರೂ ರೂಢಿಸಿಕೊಳ್ಳಿ ಎಂದು ಬಿ ಕೆ ಹರಿಪ್ರಸಾದ್ ಹೇಳಿದ್ದಾರೆ. ಭಾರತ ಸಂವಿಧಾನ ಸ್ವೀಕರಿಸಲು ಅನರ್ಹ ಎಂಬ ಶೀರ್ಷಿಕೆಯಲ್ಲಿ 1949 ನವೆಂಬರ್ 30ರಂದು ಆರ್‌ಎಸ್‌ಎಸ್‌ನ ಮುಖವಾಣಿ ಆರ್ಗನೈಸರ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ನೆನಪಿದೆಯೇ ಆರ್.ಎಸ್.ಎಸ್ ನ ಅಧ್ಯಕ್ಷನಾಗಿದ್ದ ಗೋಳ್ವಾಲ್ಕರ್, ಅಂಬೇಡ್ಕರ್ ಅವರ ಸಂವಿಧಾನ ಜಾರಿಯನ್ನು ವಿರೋಧಿಸಿದ್ದ ಇತಿಹಾಸ ಅರಿವಿದೆಯೇ ಎಂದು ಪ್ರಶ್ನಿಸಿದ್ದಾರೆ. ಗೋಳ್ವಾಲ್ಕರ್ ಬರೆದ ಆರ್ ಎಸ್ ಎಸ್‌ನ ಧರ್ಮಗ್ರಂಥ ಬಂಚ್ ಆಫ್ ಥಾಟ್ಸ್ ಕೃತಿಯಲ್ಲಿ ಸಂವಿಧಾನ, ತ್ರಿವರ್ಣ ಧ್ವಜದ ಬಗ್ಗೆ ನಿಮ್ಮ ಪರಿವಾರದ ನಿಲುವುಗಳನ್ನು ಸ್ಪಷ್ಟವಾಗಿ ಹೇಳಲಾಗಿದೆ. ನಮ್ಮದು ಎಂದು ಹೇಳಲಾಗುತ್ತಿರುವ ಈ ಸಂವಿಧಾನವು, ಪಾಶ್ಚಾತ್ಯ ದೇಶಗಳ ಸಂವಿಧಾನಗಳಿಂದ ಬೇರೆಬೇರೆ ಕಲಮ್ಮುಗಳನ್ನು ಹೆಕ್ಕಿ ತಂದು ಒಟ್ಟುಗೂಡಿಸಿದ ಕಂತೆಯಾಗಿದೆ.ಎಂದು ಹೀಗಳೆದಿದ್ದಾರೆ.

ಈ ಪುಸ್ತಕದ ಪ್ರತಿ ಖಾಲಿಯಾಗಿದ್ದರೆ ತರಿಸಿಕೊಡುತ್ತೇನೆ.

ಒಮ್ಮೆ ಓದಿ ಇದರ ನಿಲುವಿಗೆ ವಿರುದ್ಧವಾಗಿದ್ದೇನೆ ಎಂದು ಹೇಳು ಧೈರ್ಯ ಮಾಡುತ್ತೀರಾ ಎಂದು ಬಿ ಕೆ ಹರಿಪ್ರಸಾದ್ ಕೇಳಿದ್ದಾರೆ. ಇನ್ನಷ್ಟು ತಿಳಿಯಿರಿ ಬೆಲ್ಲದ್ ಅವರೇ, ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದ ಹೆಸರುವಾಸಿಯಾಗಿರುವ ಸಾವರ್ಕರ್ ಭಾರತಕ್ಕೆ ಮನುಸ್ಮೃತಿಯೇ ಶ್ರೇಷ್ಠ.

ಈ ದೇಶ ಮುಂದಿನ ನಡೆಗಳು ಮನುಸ್ಮೃತಿಯನ್ನೇ ಅನುಸರಿಸಬೇಕು ಎಂದು 1932 ತಮ್ಮ ಕಿರ್ಲೋಸ್ಕರ್ ಲೇಖನದಲ್ಲಿ ಬರೆದಿದ್ದಾರೆ.

ಈ ನಿಲುವಿನ ವಿರುದ್ಧ ನಾನಿದ್ದೇನೆ ಎಂದು ಹೇಳುವ ಕಿಂಚಿತ್ತಾದರೂ ಧೈರ್ಯ ಉಳಿದಿದೆಯಾ ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂವಿಧಾನವೇ ನೀಡಿರುವ ಆರ್ಟಿಕಲ್ 368 ಹಕ್ಕಿನ ಪರವಾಗಿ ಕಾಂಗ್ರೆಸ್ ಪಕ್ಷ ಇದೆ ಆದರೆ ಬಿಜೆಪಿ ಸಂವಿಧಾನವನ್ನೇ ಬದಲಾಯಿಸುವ ನಿಲುವು ಹೊಂದಿದೆ. ಸಂವಿಧಾನ ತಿದ್ದುಪಡಿಗೂ, ಬದಲಾವಣೆಗೂ ಭಾರಿ ಅಂತರವಿದೆ.



ಉದಯವಾಹಿನಿ ಚಿತ್ರ

**ಬಿ ಕೆ ಹರಿಪ್ರಸಾದ್ ಹೇಳಿಕೆ**

> **ಕೊನೆಯದಾಗಿ ಬೆಲ್ಲದ್ ಅವರೇ ಸಂವಿಧಾನದ ಬದಲಾಗಿ ಮನುಸ್ಮೃತಿ ಜಾರಿಗೆ ತರುವ ಸಂಘಪರಿವಾರದ ಹೋರಾಟಕ್ಕೆ ನಿಮ್ಮ ಬೆಂಬಲವೂ ಇದ್ದರೇ, ಕಬ್ಬನ್ನು ಹಿಂಡಿ ಹಿಪ್ಪೆ ಮಾಡಿ ನೊಣ, ಇರುವೆಗಳಂತೆ ಶೂದ್ರರು, ದಲಿತರ, ಬಹುಜನರಿಗೆ ಹಂಚುತ್ತಾರೆ. ಆಗ ಕಬ್ಬಿನ ಸಿಪ್ಪೆ ಮಾತ್ರ ನಿಮಗೆ, ಬೆಲ್ಲದ ರುಚಿ ಮಾತ್ರ ಪರಿವಾರದ್ದು ಸ್ವಲ್ಪ ಜಾಗೃತೆ ಇರಲಿ ಎಂದು ವಿಧಾನ ಪರಿಷತ್ ಸದಸ್ಯರಾದ ಬಿ ಕೆ ಹರಿಪ್ರಸಾದ್ ಹೇಳಿದ್ದಾರೆ.**

> **ಜನಪರವಲ್ಲದ, ಒಂದಿಷ್ಟು ಕಾನೂನುಗಳಿಗೆ ತೊಡಕು ಆಗಲಿದೆ ಎಂದರೆ ಅದನ್ನು ಪ್ರತಿಭಟಿಸುವ ಹಾಗೂ ವಿರೋಧ ವ್ಯಕ್ತಪಡಿಸುವ ಪ್ರಜಾಪ್ರಭುತ್ವದ ಸೌಂದರ್ಯವನ್ನು ನಮ್ಮಲ್ಲಿ ಉಳಿಸಿಕೊಂಡಿದ್ದೇವೆ. ಆದರೆ ನಾಗಪುರದ ಶಾಖೆಗಳಲ್ಲಿ ಪುಂಗಿ ಊದಿದ ರೀತಿಯಲ್ಲಿ ನಾವು ಕುಣಿಯುವುದಿಲ್ಲ.**

### ಬೇಲ್ ಸಿಕ್ಕರೂ ಶೂರಿಟಿ ಸಿಗದೇ ಇಬ್ಬರ ಪರದಾಟ, ನೆರವು ನೀಡ್ತಾರಾ ದರ್ಶನ್

• ಉದಯವಾಹಿನಿ ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಪವಿತ್ರಾಗೌಡ ಸೇರಿದಂತೆ ಹಲವು ಆರೋಪಿಗಳು ಜಾಮೀನು ಪಡೆದು ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಇನ್ನಷ್ಟು ತಿಳಿಯಿರಿ ಬೆಂಗಳೂರು ಆದರೆ ಹೈಕೋರ್ಟ್‌ನಿಂದ ಶುಕ್ರವಾರವೇ ಜಾಮೀನು ಸಿಕ್ಕರೂ ಇನ್ನು ಶೂರಿಟಿ ಸಿಗದ ಕಾರಣ ಆರೋಪಿಗಳಾದ ಜಗದೀಶ್ ಮತ್ತು ಅನುಕುಮಾರ್ ಸಂಕಷ್ಟಕ್ಕೆ ಸಿಲುಕಿ ಜೈಲಿನಲ್ಲಿಯೇ ಇದ್ದಾರೆ. ಈ ದೇಶ ನ. ವಿದೇಶ . ಸಿನಿಮಾ ಕ್ರೀಡೆ ಇಬ್ಬರು ಆರೋಪಿಗಳಿಗೆ ಜಾಮೀನಿಗೆ ಶೂರಿಟಿ ಒದಗಿಸಲು ಸಮಸ್ಯೆ ಎದುರಾಗಿದೆ. ಇಬ್ಬರೂ ಆರೋಪಿಗಳು ಹತ್ಯೆಯಾದ ರೇಣುಕಾಸ್ವಾಮಿಯ ಜಿಲ್ಲೆಯವರಾಗಿದ್ದು, ಅವರ ಕುಟುಂಬಸ್ಥರು ಅಷ್ಟಾಗಿ ಹಣವಂತರಲ್ಲ. ಇನ್ನು ರೇಣುಕಾಸ್ವಾಮಿಯನ್ನು ಚಿತ್ರದುರ್ಗ ದಿಂದ ಕರೆತರಲು ಜಗದೀಶ್ ಅನುಕುಮಾರ್ ಪ್ರಮುಖ ಪಾತ್ರವಹಿಸಿದ್ದರು ಎಂಬ ಆರೋಪವೂ ಇದೆ.

ಅಂತರಾಳದಿಂದ.. EDITORIAL

# ಕಲ್ಯಾಣ ಕರ್ನಾಟಕದ ಕಲ್ಯಾಣವೆಂದು


ಕಲ್ಯಾಣ ಕರ್ನಾಟಕವೂ ಸೇರಿದಂತೆ ಉತ್ತರ ಕರ್ನಾಟಕ ತೀವ್ರ ನಿರ್ಲಕ್ಷ್ಯಕ್ಕೊಳಗಾಗುತ್ತಿದೆ. ಅಭಿವೃದ್ಧಿ ಬೆಂಗಳೂರು ಕೇಂದ್ರಿತವಾಗಿದೆ ಎನ್ನುವ ಆಕ್ರೋಶಗಳು ಭುಗಿಲೆದ್ದಾಗ, ಈ ಉತ್ತರ-ದಕ್ಷಿಣದ ನಡುವಿನ ಕಂದರವನ್ನು ಮುಚ್ಚುವ ಭಾಗವಾಗಿ ಬೆಳಗಾವಿಯಲ್ಲಿ ಅಧಿವೇಶನವನ್ನು ನಡೆಸುವ ಮಹತ್ತರ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಬೆಳಗಾವಿಯ ಮೇಲೆ ಮಹಾರಾಷ್ಟ್ರ ಹಕ್ಕು ಸಾಧಿಸಿದಾಗ ಅದಕ್ಕೂ ಬೆಳಗಾವಿ ಅಧಿವೇಶನದ ಮೂಲಕ ಸರಕಾರ ಉತ್ತರ ನೀಡಿತು. ಉತ್ತರ ಕರ್ನಾಟಕ ನೆಲದಲ್ಲೇ ಆ ಭಾಗದ ಸಮಸ್ಯೆಗಳಿಗೆ ಕಿವಿಯಾಗುವುದು ಈ ಅಧಿವೇಶನದ ಮುಖ್ಯ ಉದ್ದೇಶ. ಈ ಹಿನ್ನೆಲೆಯಲ್ಲಿ ಇದೀಗ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಆ ಭಾಗದ ಸಮಸ್ಯೆಗಳು ಮುನ್ನೆಲೆಗೆ ಬಂದು ಚರ್ಚೆಯಾಗಬೇಕಾಗಿತ್ತು. ಆದರೆ, ನಮ್ಮ ಶಾಸಕರು ಈ ಭಾಗದ ಸಮಸ್ಯೆಗೆ ಅಸಡ್ಡೆ ತೋರಿಸುತ್ತಿರುವುದು ಕರ್ನಾಟಕದ ಜನರಿಗೆ ನಿರಾಶೆಯನ್ನು ತಂದಿದೆ. ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುತ್ತಿದ್ದ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಬಹಳ ಹಿಂದು ಳಿದಿರುವ ಕಾರಣ ಸಂವಿಧಾನದ ವಿಧಿ 371 –ಜೆ ಮುಖಾಂತರ ಅದಕ್ಕೊಂದು ವಿಶೇಷ ಸ್ಥಾನಮಾನ ಕಲ್ಪಿಸಿ ಅಭಿವೃದ್ಧಿ ಪಥಕ್ಕೊಂದು ದಿಕ್ಕು ದೆಸೆ ನೀಡಲಾಯಿತು. ಕಳೆದ ಹತ್ತು ವರ್ಷಗಳಲ್ಲಿ ಈ ಸಾಂವಿಧಾನಿಕ ವಿಶೇಷ ಸ್ಥಾನಮಾನವನ್ನು ಅನುಲಕ್ಷಿಸಿ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಸ್ಥಾಪಿತವಾಗಿದೆ ಕಳೆದೊಂದು ದಶಕದಲ್ಲಿ ಸಾವಿರಾರು ಕೋಟಿ ರೂ.ಗಳ ಅನುದಾನ ಈ ಪ್ರದೇಶಕ್ಕೆ ಹರಿದು ಹೋಗಿದೆ.

> **ಕರ್ನಾಟಕದ ಒಳಗೇ ಈ ಪ್ರಶ್ನೆ ಮುಖ್ಯವಲ್ಲ, ಆದರೆ ಒಟ್ಟಾರೆ ಅಭಿವೃದ್ಧಿಯ ಹೆಜ್ಜೆ- ಗತಿಯಲ್ಲಾಗಿರುವ ಲೋಪಗಳೇನು ಎಂಬುದನ್ನು ಚರ್ಚಿಸಬೇಕಾಗಿದೆ. ಕಳೆದ ವರ್ಷ ಮಹಾಲೇಖಪಾಲರು ಕಲ್ಯಾಣ ಕರ್ನಾಟಕ ಅಭಿವೃದ್ಧಿಮಂಡಳಿಯ ಕಾರ್ಯವೈಖರಿ ಬಗ್ಗೆ ನೀಡಿರುವ ವರದಿ ಯ ಈ ಪ್ರದೇಶದ ಅಭಿವೃದ್ಧಿ ಕುರಿತ ಯೋಜನಾ ದಾರಿದ, ಹಾಗೂ ಇಚ್ಛಾ ಶಕ್ತಿಯ ಕೊರತೆಗಳ ಸಹಿತ ಇಡೀ ದುರಂತವನ್ನು ಅನಾವರಣಗೊಳಿಸಿದೆ. ಪ್ರಾದೇಶಿಕ ಅಸಮಾನತೆಯನ್ನು ನೀಗಿಸಲು ಸಾಂವಿಧಾನಿಕವಾಗಿ ದತ್ತವಾಗಿರುವ ಯಾವ ಕರ್ತವ್ಯ ಕೆಲಸಗಳನ್ನು ಈ ಮಂಡಳಿ ಮಾಡಲಿಲ್ಲ ಎಂದು ಮಹಾಲೇಖಪಾಲರ ವರದಿ ಕಟುವಾಗಿ ಹೇಳುತ್ತದೆ.**

ವಿಶೇಷ ನೇಮಕಾತಿಯ ಸೌಲಭ್ಯವನ್ನೂ ಸೃಷ್ಟಿಸಲಾಗಿದೆ. ಆದರೆ ಈ ಪ್ರದೇಶ ಈಗಲೂ ಅದೇ ದಾರಿದ್ರ, ಅನಭಿವೃದ್ಧಿ ಸುಳಿಯಲ್ಲಿ ಒದ್ದಾಡುತ್ತಿರುವುದನ್ನು ಗಮನಿಸಿದರೆ ಖೇದವಾಗುತ್ತದೆ. ಭಾರತದ ಉತ್ತರ- ದಕ್ಷಿಣದ ಅಸಮಾನತೆ ಬಗ್ಗೆ ನಾವು ಮಾತಾಡುತ್ತಿದ್ದೇವೆ. ಸತತ ಅನುದಾನ ಮತ್ತಿತರ ಅನುಕೂಲಗಳ ಹೊರತಾಗಿಯೂ ಉತ್ತರ ರಾಜ್ಯಗಳು ಇನ್ನೂ ಹಿಂದುಳಿದಿರುವುದನ್ನು ಚರ್ಚಿಸುವಾಗ ನಾವು ಕರ್ನಾಟಕದಲ್ಲೇ ಇರುವ ದಕ್ಷಿಣ –ಉತ್ತರ ಸ್ಥಿತಿ ಬಗ್ಗೆಯೂ ಮಾತಾಡಬೇಕಿದೆ. ದೇಶ ಮಟ್ಟದಲ್ಲಿ ಸಂಪನ್ಮೂಲ ಹಂಚಿಕೆಯ ಬಲು ದೊಡ್ಡ ತಾರತಮ್ಯ ಚರ್ಚೆಯಲ್ಲಿದೆ. ಸಂವಿಧಾನದ 371 –ಜೆ ಅನ್ವಯ ಪ್ರಾದೇಶಿಕ ಅಸಮಾನತೆಯನ್ನು ನೀಗಿಸುವ ಹೊಣೆ ಈ ಮಂಡಳಿಗಿದೆ. ಆದರೆ ಪ್ರಾದೇಶಿಕ ಅಸಮಾನತೆ ನೀಗಿಸುವ ಯಾವ ದೂರಗಾಮಿ ಹಾದಿಯ ನೀಲ ನಕ್ಷೆಯನ್ನೂ ಈ ಮಂಡಳಿ ದಾಖಲಿಸಿಲ್ಲ. ಪ್ರತಿವರ್ಷದ ಕ್ರಿಯಾಯೋಜನೆಗಳು ನಿರಂತರವಾಗಿ ತಡವಾಗಿ ಪ್ರಸ್ತುತವಾಗಿದೆ. ಅದೂ ರಾಜ್ಯ ಆಯವ್ಯಯ ಮಂಡನೆ ಆದ ಮೇಲೆ ತಿಂಗಳಾನುಗಟ್ಟಲೆ ತಡವಾಗಿ ವಾರ್ಷಿಕ ಕ್ರಿಯಾಯೋಜನೆಗಳು ಮಂಡನೆಯಾಗಿವೆ. ಈ ಕ್ರಿಯಾಯೋಜನೆಗಳೂ ಸಾಮಾಜಿಕ, ಆರ್ಥಿಕ ಸೂಚಿಗಳನ್ನಾಧರಿಸಿದ ಗುರಿಗಳನ್ನೂ ಹೊಂದಿರಲಿಲ್ಲ. ಕಾಲಮಿತಿಯನ್ನೂ ಹೊಂದಿಲ್ಲ. ರಸ್ತೆ ಸಂಪರ್ಕದ ಕಾಮಗಾರಿಗಳಿಗೆ ಆದ್ಯತೆ ನೀಡಿದ್ದು ಬಿಟ್ಟರೆ, ಆರೋಗ್ಯ ಶಿಕ್ಷಣ, ಕೃಷಿ, ಕೌಶಲ್ಯಾಭಿವೃದ್ಧಿ ಇತ್ಯಾದಿ ಕ್ಷೇತ್ರಗಳ ಬಗ್ಗೆ ಬೇಕಾದಷ್ಟು ಗಮನವೇ ಹರಿಸಿಲ್ಲ. ಮಹಾಲೇಖಪಾಲರು ಈ ಮಂಡಳಿಯ ನಿಷ್ಕ್ರಿಯ ಸ್ಥಿತಿ ಬಗ್ಗೆ ಆಧಾರ ಸಹಿತ ಕಟುವಾದ ಟೀಕೆ ಮಾಡಿ ಉದಾಹರಣೆಗಳನ್ನೂ ಯಥೇಚ್ಛವಾಗಿ ನೀಡಿ ನಿರ್ದಿಷ್ಟ ಶಿಫಾರಸುಗಳನ್ನೂ ಮಾಡಿದ್ದಾರೆ. ಈ ಶಿಫಾರಸುಗಳು ಈ ಮಂಡಳಿ ಇಷ್ಟು ದಿನ ಮರೆತಿರುವ ಸಾಂವಿಧಾನಿಕ ಕರ್ತವ್ಯಗಳನ್ನು ನೆನಪಿಸುವ ಮೂಲ ಪಠ್ಯದಂತಿವೆ. ಮಹಾಲೇಖಪಾಲರ ವರದಿಯು ಐದಾರು ಪ್ರಮುಖ ಸೂಚಿಗಳನ್ನು ಬಳಸಿ ಈ ಪ್ರದೇಶದ ಹಿಂದುಳಿದಿರುವಿಕೆಯನ್ನು ವಿಶ್ಲೇಷಿಸುತ್ತದೆ. ನೀತಿ ಆಯೋಗದ ಸೂಚಿಗಳ ಪ್ರಕಾರವೇ ಈ ಪ್ರದೇಶದ ನಾಲ್ಕು ಜಿಲ್ಲೆಗಳ ಕಲಬುರಗಿ ರಾಯಚೂರು, ಬೀದರ್ ಮತ್ತು ಯಾದಗಿರಿ ರಾಜ್ಯದ ಅಭಿವೃದ್ಧಿ ಸೂಚಿಗಿಂತ ಕೆಳಗಿವೆ. ಹಿಂದುಳಿದಿರುವ 75 ತಾಲ್ಲೂಕುಗಳಲ್ಲಿ 20 ತಾಲ್ಲೂಕುಗಳು ಈ ಪ್ರದೇಶದಲ್ಲೇ ಇವೆ. ಕಲಬುರಗಿಯ ಎಲ್ಲಾ ತಾಲ್ಲೂಕುಗಳೂ ಈ ಪಟ್ಟಿಯಲ್ಲಿವೆ!. ರಾಷ್ಟ್ರೀಯ ಬಹು ಆಯಾಮ ಬಡತನ ಸೂಚಿಯ ವರದಿ ಉಲ್ಲೇಖಿಸಿ ಈ ಸೂಚಿ 12 ಮಾನದಂಡಗಳನ್ನು ಬಳಸುತ್ತದೆ. ಕಾಲಕಾಲಕ್ಕೆ ಬೇರೆ ಬೇರೆ ಕ್ಷೇತ್ರಗಳ ಸ್ಥಿತಿಗತಿಯನ್ನು ಅಳೆಯಲೂ ಇದು ಸಾಧನ ನೀತಿ ಆಯೋಗವು 2020–21ರಲ್ಲಿ ತಯಾರಿಸಿದ ಈ ಸೂಚಿಯನ್ವಯ ಕರ್ನಾಟಕದ ಅತ್ಯಂತ ಕಳಪೆ ಸಾಧನೆ ಮಾಡಿದ ನಾಲ್ಕೂ ಜಿಲ್ಲೆಗಳು ಈ ಪ್ರದೇಶಕ್ಕೆ ಸೇರಿದವು. ವಿಪರ್ಯಾಸವೆಂದರೆ ಈ ಮಂಡಳಿ 2016ರಿಂದ ಇಂದಿನವರೆಗೆ ಯಾವುದೇ ಬಗೆಯ ಬಹು ಆಯಾಮದ ಬಡತನ ಸೂಚಿಯ ಸಹಿತ ಯಾವುದೇ ಸೂಚಿಗಳನ್ನು ಬಳಸಿ ವಿವರಗಳನ್ನೇ ಸಂಗ್ರಹಿಸಿಲ್ಲ. ಮಾನವ ಅಭಿವೃದ್ಧಿ ಸೂಚಿ ಮುಖ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ತಲಾ ಆದಾಯದ ಅಸಮಾನತೆಗಳನ್ನು ಮುಖ್ಯ ಸೂಚಿಗಳಾಗಿ ಇಟ್ಟುಕೊಂಡಿವೆ. ಈ ಸೂಚ್ಯಂಕದಲ್ಲೂ ಕಲ್ಯಾಣ ಕರ್ನಾಟಕದ ಅಷ್ಟೂ ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಕೆಳಗಿವೆ. ನಂಜುಂಡಪ್ಪ ವರದಿ 2002ರಲ್ಲಿ 175 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿತ್ತು ಈ ತಾಲ್ಲೂಕುಗಳಲ್ಲಿ 31 ತಾಲ್ಲೂಕುಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದವು. 2020ರ ವೇಳೆಗೆ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ರಾಜ್ಯದಲ್ಲಿ 38. ಈ ಪೈಕಿ 21 ತಾಲ್ಲೂಕುಗಳು ಈ ಪ್ರದೇಶಕ್ಕೆ ಸೇರಿವೆ. ಇದರೊಂದಿಗೆ ಆರೋಗ್ಯ ಶಿಕ್ಷಣಗಳ ಮಾನದಂಡಗಳನ್ನೂ ವರದಿ ಬಳಸಿ ಈ ಮಂಡಳಿಯ ನಿಷ್ಕ್ರಿಯತೆಯ ಬಗ್ಗೆ ಟೀಕೆ ಮಾಡಿದೆ.

ಈ ಮಂಡಳಿಯ ಕಾರ್ಯವೈಖರಿಗೆ ಮಹಾಲೇಖ ಪಾಲರು ಕೊಡುವ ಹಲವು ಉದಾಹರಣೆಗಳಲ್ಲಿ ಒಂದು ಗಮನಾರ್ಹವಾಗಿದೆ. ಈ ಮಂಡಳಿಯ ಅಧ್ಯಕ್ಷರಿಗೆ ವಿವೇಚನಾ ನಿಧಿ ಅಂತ ಇದೆ. ಈ ವಿವೇಚನೆಯನ್ನು ಬಳಸಿ ಈ ಮಂಡಳಿಯ ಅಧ್ಯಕ್ಷರು ಅನುದಾನ ಬಿಡುಗಡೆ ಮಾಡಿದ್ದರಲ್ಲಿ ಶೇ. 85ರಷ್ಟು ಕಲಬುರಗಿ ಜಿಲ್ಲೆಗೇ ಸಂದಾಯವಾಗಿದೆ! ಇದನ್ನು ಅಧಿಕಾರದ ದುರುಪಯೋಗ, ಪ್ರಭಾವ ಏನೆಂದು ಕರೆದರೆ ಸರಿ ಹೋಗುತ್ತೆ ಹಾಗೆಯೇ ಒಂದೇ ಕಾಮಗಾರಿಗೆ ಎರಡೆರಡು ಅನುದಾನ ಬಿಡುಗಡೆ ಅಂದಾಜು ಪಟ್ಟಿಯೇ ಇಲ್ಲದ ಕಾಮಗಾರಿಗಳು ಹೀಗೆ ಈ ಮಂಡಳಿಯ ಅಧ್ವಾನಗಳ ಪಟ್ಟಿ ಮುಂದುವರಿಯುತ್ತದೆ. ಇತ್ತೀಚೆಗೆ ಕಾಂಗ್ರೆಸ್ ಸರಕಾರ ಒಂದೆರಡು ಅನುದಾನಗಳ ಬಗ್ಗೆ ತನಿಖೆಗೆ ಹೇಳಿದೆ.

# ದಾಂಪತ್ಯ



**ವಿಶ್ವಾಸ್.ಡಿ.ಗೌಡ**
• ಉದಯವಾಹಿನಿ, ವಿಶೇಷ



ಇಂದಿನ ದಿನಗಳಲ್ಲಿ ಗಂಡ ಹೆಂಡತಿಯ ನಡುವೆ ಜಗಳವಾಗಲು ಕಾರಣವಾಗುವ ಕ್ಷುಲಕ ವಿಷಯಗಳೆಂದರೆ ಆಫೀಸಿನಿಂದ ಗಂಡ ತಡವಾಗಿ ಬರುವುದು. ಗಂಡ ಹೆಂಡತಿಯ ಮಾತು, ಹೆಂಡತಿ ಗಂಡನ ಮಾತನ್ನು ಆಲಿಸದಿರುವುದು. ನೆರೆಯ ಮನೆಯವರೊಂದಿಗೆ ಮಾತನಾಡಿದರೆ ಸಂಶಯ, ಹೆಚ್ಚಿನ ವಿದ್ಯಾಭ್ಯಾಸದ ಪ್ರಶಂಸೆ, ಶಾಪಿಂಗ್‌ಗೆ ಬರದ ಗಂಡ, ರೀಲ್ಸ್ ಮಾಡುವ ಹೆಂಡತಿ, ಮಕ್ಕಳನ್ನು ಶಾಲೆಗೆ ಬಿಡದ ಗಂಡ, ಮಕ್ಕಳಿಗೆ ಊಟ ಮಾಡಿಸಿದ ಹೆಂಡತಿ.

ದುಂದುವೆಚ್ಚ, ಸಣ್ಣ ಪುಟ್ಟ ವಿಷಗಳಿಗೂ ಸಿಡುಕು, ಪರಸ್ಪರರ ಆಸಕ್ತಿಯನ್ನು ಗೌರವಿಸದಿರುವುದು ಹೀಗೆ ಹೇಳುತ್ತಾ ಹೋದರೆ ಕಾರಣಗಳ ಪುಸ್ತಕವನ್ನೇ ಬರೆಯಬಹುದು. ಆದರೆ ಇವುಗಳಿಂದ ಹೊರಬಂದು ಗಂಡ ಹೆಂಡತಿ ಸುಖವಾಗಿ ಸಂಸಾರ ನಡೆಸಲು ಕೆಲವು ಮಾರ್ಗೋಪಾಯಗಳು ಹಾಗೂ ಪರಿಹಾರಗಳು ಇಲ್ಲಿವೆ.

### ಕ್ಷಮಾ ಗುಣ ಮುಖ್ಯ

**ಇಬ್ಬರಲ್ಲಿ ಯಾರಾದರೂ ತಪ್ಪು ಮಾಡಿದರೇ ಅದನ್ನೇ ಹೇಳಿ ಅವರ ಮನಸ್ಸನ್ನು ನೋಯಿಸುವ ಬದಲು, ತಪ್ಪನ್ನು ಕ್ಷಮಿಸಿ ಇನ್ನೆಂದೂ ಅದರ ಮಾತನ್ನು ತೆಗೆಯದೇ ಮೊದಲಿನಂತೆ ಕಾಣುವುದು ಬಹಳ ಮುಖ್ಯ. ಕ್ಷಮಾಪಣೆ ಕೇವಲ ಬಾಯಿ ಮಾತಿಗೆ ಆಗಿರದೆ ಬದಲಿಗೆ ಅದನ್ನು ಕಾರ್ಯ ರೂಪದಲ್ಲಿ ತೋರಿಸಬೇಕು.**

**ಪರಸ್ಪರರನ್ನು ಗೌರವಿಸುವುದು:** ಗಂಡ ಹೆಂಡತಿಯರಿಬ್ಬರೂ ಪರಸ್ಪರರನ್ನು ಹಾಗೂ ಇಬ್ಬರ ಆಸಕ್ತಿಯನ್ನು ಗೌರವಿಸಬೇಕು. ಹೀಗಾದಾಗ ಒಬ್ಬರ ನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

### ಕುಟುಂಬದವರ ಮೇಲೆ ಪ್ರೀತಿ ಮುಖ್ಯ

**ಎಲ್ಲಾ ಸಂಬಂಧಗಳೂ ಬಹುಕಾಲ ಉಳಿಯಲು ಮುಖ್ಯವಾಗಿ ಬೇಕಾಗಿರುವದೇ ಪ್ರೀತಿ. ಪರಸ್ಪರ ಕುಟುಂಬದವರ ಮೇಲೆ ಇಬ್ಬರಿಗೂ ಗೌರವ, ಕಾಳಜಿ. ಪ್ರೀತಿಯಿರಬೇಕು. ಆಗ ಬದುಕು ಚಂದ. ಮಕ್ಕಳಾದವರು ಮಕ್ಕಳನ್ನು ಹೊರೆ, ತಮ್ಮ ಪ್ರೀತಿಗೆ ಅಡ್ಡಿಯೆಂದು ಭಾವಿಸದೇ ಮಕ್ಕಳನ್ನು ಮಮತೆಯಿಂದ ಕಾಣಬೇಕು. ಗಂಡನ ಮೇಲೆ ಹೆಂಡತಿಗೆ, ಹೆಂಡತಿ ಮೇಲೆ ಗಂಡನಿಗೆ ಪ್ರೀತಿ ಇದ್ದರೆ ಕೋಪ, ಜಗಳವೆಲ್ಲವೂ ಕ್ಷಣಮಾತ್ರ.**

**ಸಲಹೆಗಳನ್ನು ಆಲಿಸುವುದು:** ಪರಸ್ಪರರ ಸಲಹೆಗಳನ್ನು ಇಬ್ಬರೂ ತಾಳ್ಮೆಯಿಂದ ಕೇಳಿ, ಅದಕ್ಕೆ ತಕ್ಕುದಾದ ನಿರ್ಧಾರವನ್ನು ತೆಗೆದುಕೊಂಡರೆ ಸಮಸ್ಯೆಯೇ ಬರುವುದಿಲ್ಲ.

**ಕ್ಷುಲಕ ವಿಷಯಗಳಿಗೆ ಜಗಳ ಬೇಡ:** ಸಣ್ಣ ಪುಟ್ಟ ವಿಷಯಗಳನ್ನೂ ಇಬ್ಬರೂ ದೊಡ್ಡದು ಮಾಡದೇ, ಆ ವಿಷಯದ ವಾಸ್ತವತೆಯನ್ನು ಅರಿತು ಆ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬಾರದು.

ಪರರಂತೆ ಬದುಕಬೇಕೆಂಬ ಅತಿಯಾಸೆ ಬೇಡ

ಹಾಸಿಗೆಯಿದ್ದಷ್ಟು ಕಾಲು ಚಾಚು ಎಂಬ ಗಾದೆಯಂತೆ ತಮ್ಮಗೆ ಇದ್ದುದರಲ್ಲೇ ಪರಸ್ಪರರು ಸಂತೋಷದಿಂದ ಬದುಕಲು ಕಲಿಯಬೇಕು. ಅದನ್ನು ಬಿಟ್ಟು ಅವರ ಮನೆ ಹಾಗಿದೆ, ನಮ್ಮ ಮನೆ ಹೀಗಿದೆ, ಅವರ ಬಳಿ ಕಾರಿದೆ, ನಮ್ಮ ಬಳಿ ಸ್ಕೂಟರು ಎಂದು ಪರರ ಹೋಲಿಕೆಯನ್ನು ಮಾಡುತ್ತಾ ನಿಮ್ಮ ದಿನನಿತ್ಯದ ಬದುಕನ್ನು ಹಾಳು ಮಾಡಿಕೊಳ್ಳಬಾರದು. ನಿಮ್ಮ ಬಳಿಯಿರುವುದೇ ಶ್ರೇಷ್ಠವೆಂದು ನೆನೆದು ಬದುಕು ನಡೆಸಬೇಕು.

**ಪರರಂತೆ ಬದುಕಬೇಕೆಂಬ ಅತಿಯಾಸೆ ಬೇಡ**

ಪರಸ್ಪರರೊಂದಿಗೆ ಸಮಯ ಕಳೆಯಬೇಕು

ಗಂಡ ಹೆಂಡತಿ ಇಬ್ಬರೂ ತಮಗೆ ಸಿಗುವ ಸಮಯವನ್ನು ಪರಸ್ಪರ ಕಳೆಯುತ್ತಾ, ಪ್ರಯಾಣಗಳನ್ನು ಮಾಡುತ್ತಾ, ವಿಷಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಇಬ್ಬರಿಗೂ ಇಷ್ಟವಾದ ಸ್ಥಳಗಳಿಗೆ ಭೇಟಿ ಕೊಡುವುದು. ಮೊಬೈಲ್‌ನಲ್ಲಿ ಚಾಟ್ ಮಾಡಿಕೊಂಡು ಸಂವಹನ ನಡೆಸುವ ಬದಲು ಇಬ್ಬರೂ ಪಕ್ಕಪಕ್ಕ ಕುಳಿತುಕೊಂಡು ಮಾತನಾಡಿದರೆ ಸಮಸ್ಯೆಯೇ ಇರುವುದಿಲ್ಲ.

ಅಹಂ, ಒಣ ಜಂಭ ಬಿಟ್ಟು ಮಾತು ಆರಂಭಿಸಬೇಕು. ಗಂಡ ಹೆಂಡತಿಯ ನಡುವೆ ಜಗಳವಾದರೇ, ಗಂಡ ಮೊದಲು ಹೆಂಡತಿಯೇ ಮಾತನಾಡಲಿ ಎಂದೋ ಅಥವಾ ಹೆಂಡತಿ ಮೊದಲು ಗಂಡನೇ ಮಾತನಾಡಲಿ ಎಂದೂ ಸುಮ್ಮನೆ ಕೂತು ಕೋಪವನ್ನು ಬೆಳೆಸದೇ ಇಬ್ಬರೂ ಮುಂದು ಮಾತನಾಡಲು ಸಿದ್ಧರಾಗಿರಬೇಕು. ಆಗ ಕೋಪ ಹೆಚ್ಚು ಸಮಯವಿರುವುದಿಲ್ಲ.

**ಕೆಲಸಗಳಲ್ಲಿ ಸಹಕಾರ:** ಗಂಡನ ಕೆಲಸಗಳಲ್ಲಿ ಹೆಂಡತಿ, ಹೆಂಡತಿಯ ಕೆಲಸಗಳಲ್ಲಿ ಗಂಡ ಪರಸ್ಪರ ಸಹಕರಿಸಬೇಕು. ಯಾರಿಗೂ ಯಾವುದೂ ಹೊರೆಯಾಗಬಾರದು. ಹೆಂಡತಿಗೆ ಮನೆ ಕೆಲಸದಲ್ಲಿ ಗಂಡನೂ ನೆರವಾಗಬೇಕು. ಮುಖ್ಯವಾಗಿ ಹೆಂಡತಿಗೆ ಮುಟ್ಟಿನ ಸಮಯ ಬಂದಾಗ ಅದನ್ನು ಸ್ವತಃ ಗಂಡನೇ ಅರ್ಥ ಮಾಡಿಕೊಂಡು ಆಕೆಗೆ ವಿಶ್ರಮಿಸಲು ಸಹಕರಿಸಿ, ಆಕೆಯ ಕೆಲಸದಲ್ಲಿ ನೆರವಾಗಬೇಕು.

# ಮೊಸರು ತಿನ್ನೋದ್ರಿಂದ ದೇಹದಲ್ಲಿ ಕೊಲೆಸ್ಟ್ರಾಲ್ ಹೆಚ್ಚುತ್ತಾ

• ಉದಯವಾಹಿನಿ ಬೆಂಗಳೂರು

ಮೊಸರು ರುಚಿಕರವಾಗಿರುವುದರ ಜತೆಗೆ ಆರೋಗ್ಯಕರವೂ ಆಗಿದೆ. ಮೊಸರಿನ ನಿಯಮಿತ ಸೇವನೆಯು ದೇಹವನ್ನು ಬಲಪಡಿಸುತ್ತದೆ ಮತ್ತು ರೋಗಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಮೊಸರು ಕ್ಯಾಲ್ಸಿಯಂ, ಪ್ರೋಟೀನ್, ರಂಜಕ ಮತ್ತು ವಿಟಮಿನ್ ಬಿ 12 ಸೇರಿದಂತೆ ಎಲ್ಲಾ ಅಗತ್ಯ ಪೋಷಕಾಂಶಗಳನ್ನು ಒಳಗೊಂಡಿದೆ.

ಚಳಿಗಾಲದಲ್ಲಿ ಮೊಸರು ಸೇವನೆ ಕುರಿತು ಆಯುರ್ವೇದ ಏನು ಹೇಳುತ್ತದೆ
ಪ್ರೋಬಯಾಟಿಕ್ಸ್ ಆಹಾರಜೀರ್ಣಕ್ರಿಯೆಯನ್ನು ಸುಧಾರಣೆಮೂಳೆಗಳು, ಹಲ್ಲುಗಳಿಗೆ ಪ್ರಯೋಜನಕಾರಿ ತೂಕವು ರಾಜಕೀಯ ಕ್ರೀಡೆ ನಿಯಂತ್ರಣಕ್ಕೆ ಸಹಕಾರಿಮೊಸರು ತಿನ್ನಲು ಸರಿಯಾದ ಮಾರ್ಗ ಯಾವುದು

ಮೊಸರು ಸೇವನೆಯಿಂದ ಜೀರ್ಣಕ್ರಿಯೆ ಸಮಸ್ಯೆಗಳು, ಮೂಳ ದೌರ್ಬಲ್ಯ, ಅಧಿಕ ರಕ್ತದೊತ್ತಡ, ಹೃದ್ರೋಗಗಳು, ಚರ್ಮ ರೋಗಗಳು, ರೋಗನಿರೋಧಕ ಶಕ್ತಿ ಕೊರತೆ ಮತ್ತು ಬೊಜ್ಜು ಮುಂತಾದ ಸಮಸ್ಯೆಗಳಿಂದ ಪರಿಹಾರ ದೊರೆಯುತ್ತದೆ. ಹೆಚ್ಚಿನ ಜನರು ಮೊಸರಿನ ಸ್ವಭಾವವನ್ನು ಶೀತ ಎಂದು ಪರಿಗಣಿಸುತ್ತಾರೆ ಮತ್ತು ಆದ್ದರಿಂದ ಚಳಿಗಾಲದಲ್ಲಿ ಅದನ್ನು ಹೆಚ್ಚು ಸೇವಿಸುವುದಿಲ್ಲ. ಅ ಆರೋಗ್ಯ – ಅಂಕಣ ಈ ವಿಡಿಯೋ–ಗ್ಯಾಲರಿ ಚಳಿಗಾಲದಲ್ಲಿ ಮೊಸರು ತಿನ್ನಬೇಕೇ ಅಥವಾ ಬೇಡವೇ ಎಂಬ ಗೊಂದಲ ನಿಮಲ್ಲು ಇದೆಯೇ ಹಾಗಾದ್ರೆ ಈ ಬಗ್ಗೆ ತಜ್ಞರು ಹೇಳೋದೇನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಎಲ್ಲಾ ಆಯುರ್ವೇದ ಪಠ್ಯಗಳಲ್ಲಿ ಮೊಸರಿನ ಸ್ವಭಾವವನ್ನು ಬಿಸಿ ಎಂದು ವಿವರಿಸಲಾಗಿದೆ. ಅಂದರೆ ಮೊಸರಿನ ಸ್ವಭಾವವು ಬಿಸಿಯಾಗಿರುತ್ತದೆ ಮತ್ತು ಚಳಿಗಾಲದಲ್ಲಿ ಅದನ್ನು ತಿನ್ನುವುದರಿಂದ ಹೆಚ್ಚಿನ ಪ್ರಯೋಜನಗಳನ್ನು ಪಡೆಯಬಹುದು.



**ಮೊಸರಿನಲ್ಲಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಸಮೃದ್ಧವಾಗಿದೆ. ಇದು ಮೂಳೆಗಳನ್ನು ಬಲಪಡಿಸಲು ಮತ್ತು ಆಸ್ಟಿಯೊಪೊರೋಸಿಸ್‌ನಿಂದ ರಕ್ಷಿಸಲು ಸಹಾಯ ಮಾಡುತ್ತದೆ. ನಿಯಮಿತವಾಗಿ ಮೊಸರು ತಿನ್ನುವುದು ಕೊಲೆಸ್ಟ್ರಾಲ್ ಮಟ್ಟ ಮತ್ತು ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ.ಚಳಿಗಾಲದಲ್ಲಿ ಮೊಸರು ತಿನ್ನಬಹುದೇ..ಬೇಡವೇ; ಗೊಂದಲಕ್ಕೆ ಇಲ್ಲಿದೆ ಉತ್ತರ**

ಮೊಸರು ಪ್ರೋಬಯಾಟಿಕ್ ಆಹಾರವಾಗಿದ್ದು ಇದರಿಂದ ನೀವು ಆರೋಗ್ಯಕರ ಬ್ಯಾಕ್ಟೀರಿಯಾವನ್ನು ಪಡೆಯಬಹುದು ಮತ್ತು ಇದರ ಹೊರತಾಗಿ ಇದು ಕ್ಯಾಲ್ಸಿಯಂ ಮತ್ತು ವಿಟಮಿನ್ ಬಿ 12ನ ಉತ್ತಮ ಮೂಲವಾಗಿದೆ. ಇದು ದೇಹದ ಸ್ನಾಯುಗಳು ಮತ್ತು ಮೂಳೆಗಳನ್ನು ಬಲಪಡಿಸಲು ಅವಶ್ಯಕವಾಗಿದೆ.

ಮೊಸರಿನಲ್ಲಿ ಇರುವ ಪ್ರೋಬಯಾಟಿಕ್‌ಗಳು (ಉತ್ತಮ ಬ್ಯಾಕ್ಟೀರಿಯಾ) ಜೀರ್ಣಾಂಗ ವ್ಯವಸ್ಥೆಯನ್ನು ಆರೋಗ್ಯಕರವಾಗಿರಿಸುತ್ತದೆ. ಮಲಬದ್ಧತೆ ಮತ್ತು ಗ್ಯಾಸ್‌ನಂತಹ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ. ಮೊಸರಿನಲ್ಲಿ ಇರುವ ಉತ್ತಮ ಬ್ಯಾಕ್ಟೀರಿಯಾಗಳು ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಮತ್ತು ಸೋಂಕಿನಿಂದ ರಕ್ಷಿಸುತ್ತದೆ. ಮೊಸರಿನಲ್ಲಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಸಮೃದ್ಧವಾಗಿದೆ. ಇದು ಮೂಳೆಗಳನ್ನು ಬಲಪಡಿಸಲು ಮತ್ತು ಆಸ್ಟಿಯೊಪೊರೋಸಿಸ್‌ನಿಂದ ರಕ್ಷಿಸಲು ಸಹಾಯ ಮಾಡುತ್ತದೆ. ನಿಯಮಿತವಾಗಿ ಮೊಸರು ತಿನ್ನುವುದು ಕೊಲೆಸ್ಟ್ರಾಲ್ ಮಟ್ಟ ಮತ್ತು ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ.

ಮೊಸರು ಪ್ರೋಟೀನ್ ಮತ್ತು ಕಡಿಮೆ ಕ್ಯಾಲೋರಿಗಳನ್ನು ಹೊಂದಿರುತ್ತದೆ. ಇನ್ನಷ್ಟು ತಿಳಿಯಿರಿ ಇದು ತೂಕ ಇಳಿಕೆಗೆ ಉತ್ತಮ ಆಯ್ಕೆಯಾಗಿದೆ. ಇದು ಹಸಿವನ್ನು ನಿಯಂತ್ರಿಸುತ್ತದೆ ಮತ್ತು ನೀವು ಹೊಟ್ಟೆ ತುಂಬಿರುವಂತೆ ಮಾಡುತ್ತದೆ. ಮೊಸರಿನಲ್ಲಿ ಇರುವ ಪ್ರೋಬಯಾಟಿಕ್ಸ್ ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತದೆ. ಇದು ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ. ನೀವು ಮೊಸರನ್ನು ಬೆಲ್ಲ ಅಥವಾ ಜೇನುತುಪ್ಪದೊಂದಿಗೆ ತಿನ್ನಬಹುದು. ಇದು ಬೆಚ್ಚಗಾಗುವ ಪರಿಣಾಮವನ್ನು ನೀಡುತ್ತದೆ ಮತ್ತು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ರಾಯತಾ ಅಥವಾ ಲಸ್ಸಿ ಬದಲಿಗೆ ದಪ್ಪ ಮೊಸರು ಸೇವಿಸುವುದು ಉತ್ತಮ. ತಣ್ಣನೆಯ ಮೊಸರು ತಿನ್ನುವುದನ್ನು ತಪ್ಪಿಸಿ. ಮೊಸರನ್ನು ಕೋಣೆಯ ಉಷ್ಣಾಂಶಕ್ಕೆ ತಂದ ನಂತರ ತಿನ್ನಿರಿ ಅಥವಾ ಸ್ವಲ್ಪ ಬೆಚ್ಚಗೆ ಸೇವಿಸಿ. ಅ ಆರೋಗ್ಯ ಅಸ್ತಮಾ, ಸೈನಸ್ ಅಥವಾ ಆಗಾಗ್ಗೆ ಗಂಟಲಿನ ಸಮಸ್ಯೆ ಇರುವವರು ಚಳಿಗಾಲದಲ್ಲಿ ಮೊಸರನ್ನು ಸೇವಿಸಬಾರದು.

## ದಿನಕ್ಕೊಂದು ಮುಕ್ತಕ -55




**ಸಾಮಾಜಿಕ ಕಳಕಳಿ**
**ಹೆಚ್.ಎಸ್.ಪ್ರತಿಮಾ ಹಾಸನ್**
**ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ**

• ಉದಯವಾಹಿನಿ, ವಿಶೇಷ

ಹಕ್ಕಿಗಳು, ನವಿಲುಗಳು ಕುಣಿಯುತಿರೆ ಸಂತಸದಿ
ಸೊಕ್ಕಿನಲಿ ಮನುಕುಲವು ನಡೆಯದಿರಲಿ
ಮಿಕ್ಕಿಸುತ ಹಣವನ್ನು ಸಂಸಾರ ಸಾಗಿಸಲು
ಸಿಕ್ಕುವುದು ಬಯಸಿದ್ದು ಲಕ್ಷ್ಮಿ ದೇವಿ.....

**ಭಾವಾರ್ಥ :** ಹಕ್ಕಿಗಳು, ನವಿಲುಗಳು ಒಂದಾಗಿ ಕುಣಿಯುತ್ತಿದ್ದರೆ ಸಂತಸವಾಗುತ್ತದೆ. ಹಾರಾಡುತ್ತಿರುವ ನವಿಲುಗಳು ಹಕ್ಕಿಗಳು ಒಂದಾಗಿ ಕುಣಿಯುತ್ತಿದ್ದಾಗ ನೋಡಲು ಬಹಳ ಚಂದವೆನಿಸುತ್ತದೆ. ಮನುಜ ಕುಲವು ಅಷ್ಟೇ ಯಾವುದೇ ರೀತಿ ಸೊಕ್ಕು ತೋರಿಸದಂತೆ ನಡೆಯಬೇಕು. ಜೀವನ ಮಾಡುವಾಗ ಕುಟುಂಬಗಳಲ್ಲಿ ಹಣವನ್ನು ಉಳಿತಾಯ ಮಾಡಿದರೆ ಸಂಸಾರ ಸುಖವಾಗಿ ಸಾಗುತ್ತದೆ. ಆಗ ಪ್ರೀತಿಯು ಬಹಳಷ್ಟು ಸಿಗುತ್ತವೆ. ಬದುಕಲು ಹಣವು ಬಹಳಷ್ಟು ಮುಖ್ಯ ಅದರ ಉಳಿತಾಯದಿಂದ ಹಲವಾರು ಸಮಸ್ಯೆಗಳನ್ನು ನಿವಾರಿಸಬಹುದು. ಅರ್ಧಕ್ಕೆ ಅರ್ಧ ಕಷ್ಟಗಳು ಹಣದ ಸಮಸ್ಯೆ ಇಲ್ಲದಿದ್ದಾಗ ನಿವಾರಣೆಯಾಗುತ್ತವೆ.



# ಬೆಂಗಳೂರು-ಕಾಸರಗೋಡು ಕನ್ನಡ ಸ್ನೇಹ ಮಿಲನ ಕಾರ್ಯಕ್ರಮ

• ಉದಯವಾಹಿನಿ ಕಾಸರಗೋಡು

ಬೇಕುಲ ಗೋಕುಲಂ ಗೋಶಾಲೆ ಸಭಾಂಗಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.)ಮತ್ತು ವಿಕಾಸ ಟ್ರಸ್ಟ್ (ರಿ.) ಆಯೋಜಿಸುವ ಬೆಂಗಳೂರು–ಕಾಸರಗೋಡು ಕನ್ನಡ ಸ್ನೇಹ ಮಿಲನ ಕಾರ್ಯಕ್ರಮ


ಉದ್ಘಾಟನೆಯನ್ನು ವಿಕಾಸ ಟ್ರಸ್ಟ್ ಅಧ್ಯಕ್ಷರಾದ ರವಿನಾರಾಯಣ ಗುಣಾಜೆ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮತ್ತು ಕಾಸರಗೋಡು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಶಿಲ್ಪಾ ದ್ಯಾವಯ್ಯ, ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕದ ಅಧ್ಯಕ್ಷರಾದ ಡಾ||ಜಯಪ್ರಕಾಶ್ ತೊಟ್ಟೆತ್ತೋಡಿ, ಬಿಬಿಎಂಪಿ ನೌಕರರ ಕನ್ನಡ ಸಂಘದ ಅಧ್ಯಕ್ಷರಾದ ಸಾಯಿಶಂಕರ್, ಖ್ಯಾತ ಜ್ಯೋತಿಷ್ಯರು,ಬೇಕಲ ಗೋಕುಲಂ ಗೋಶಾಲೆಯ ಸಂಸ್ಥಾಪಕರಾದ ವಿಷ್ಣುಪ್ರಸಾದ್ ರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು.



**ಕನ್ನಡ ಸ್ನೇಹ ಮಿಲನ ಉದ್ಘಾಟನೆ**

ಉದಯವಾಹಿನಿ ಚಿತ್ರ

ಬಿಬಿಎಂಪಿ ನೌಕರರ ಸಾಂಸ್ಕೃತಿಕ ಸಂಘದ ಸದಸ್ಯರಿಗೆ ಕಾಸರಗೋಡು ಪ್ರಶಸ್ತಿ ಪ್ರದಾನ ಮಾಡಲಾಯಿತು ಮತ್ತು ಶ್ರೀಮತಿ ಅಪರ್ಣ ಕೆ. ಶರ್ಮ ಮತ್ತು ತಂಡವರಿಂದ ಶಾಸ್ತ್ರೀಯ ಸಂಗೀತ ಕಛೇರಿ ಏರ್ಪಡಿಸಲಾಗಿತ್ತು.



# ರಾಮಾಯಣ

**ವಿಶ್ವಾಮಿತ್ರನಿಗೆ ತ್ರಿ ಶಂಕು ವಿನ ಶರಣಾಗತಿ**

• ಹಿಂದಿನ ಸಂಚಿಕೆಯಿಂದ 57 ನೆಯ ಅಧ್ಯಾಯ

ಆಮೇಲೆ ತ್ರಿಶಂಕುಮಹಾರಾಜನ ಮಾತನ್ನು ಕೇಳಿ ವಸಿಷ್ಠ ಮುನೀಶ್ವರನ ನೂರು ಮಂದಿ ಮಕ್ಕಳೂ ಆ ಮಹಾರಾಯನನ್ನು ನೋಡಿ 'ಎಲೈ ರಾಜನೆ, ಮಹಾಜ್ಞಾನಿಯೂ ಮಹಾತ್ಮನೂ ಗುರುವೂ ಆದ ವಸಿಷ್ಠ ಮುನೀಶ್ವರನು ಈ ಕಾರ್ಯವು ಸಾಧ್ಯವಲ್ಲವೆಂದು ನಿರಾಕರಿಸಿದ ಮೇಲೆ, ನೀನು ಮತ್ತೊಬ್ಬರ ಸಮೀಪಕ್ಕೆ ಹೋಗುವುದು ಉಚಿತವಲ್ಲ. ಇಕ್ಷ್ವಾಕುವಂಶದ ಮಹಾರಾಜರಿಗೆ ವಸಿಷ್ಠ ಮುನೀಶ್ವರನು ಪುರೋಹಿತನು. ಆತನೇ ಗುರುವು. ಸತ್ಯಸಂಧನಾದ ವಸಿಷ್ಠ ಮುನೀಶ್ವರನ ಮಾತನ್ನು ಯಾರೂ ಅತಿಕ್ರಮಿಸಬಾರದು. ಷಡ್ಗುಣೈಶ್ವರಸಂಪನ್ನನಾದ ವಸಿಷ್ಠ ಮಹರ್ಷಿಯು ಈ ಕಾರವು ಸಾಧ್ಯವಾದದ್ದಲ್ಲವೆಂದು ನಿರಾಕರಿಸಿದಮೇಲೆ ನಾವು ಆತನನ್ನ ತಿಕ್ರಮಿಸಿ ನಿನ್ನ ಯಾಗವನ್ನು ಮಾಡಿಸುವದಕ್ಕೆ ಸಮರ್ಥರಲ್ಲ. ವಸಿಷ್ಠ ಮುನೀಶ್ವರನು ಸ್ವರ್ಗ ಮರ್ತ್ಯ ಪಾತಾಳಗಳಲ್ಲಿಯೂ ಯಾಗವನ್ನು ಮಾಡಿಸುವುದಕ್ಕೆ ಸಮರ್ಥನು. ಆತನನ್ನು ಅತಿಕ್ರಮಿಸುವುದಕ್ಕೆ ನಾವು ಸಮರ್ಥರಲ್ಲ. ಆದ್ದರಿಂದ ನೀನು ಈ ಮಕ್ಕಳಾಟದ ಬುದ್ಧಿಯನ್ನು ಬಿಟ್ಟು ಸುಖದಿಂದ ನಿನ್ನ ಪಟ್ಟಣಕ್ಕೆ ಹೋಗು' ಎಂದು ನುಡಿದರು.

ಅವರ ಮಾತನ್ನು ಕೇಳಿ ತ್ರಿಶಂಕು ಮಹಾರಾಜನು ಕೋಪದಿಂದ ಗುರುಪುತ್ರರೆ, ನನ್ನನ್ನು ಗುರು ವಾದ ವಸಿಷ್ಠ ಮುನೀಶ್ವರನು ನಿರಾಕರಿಸಿದನು. ಆಮೇಲೆ ನಿಮ್ಮ ಸಮೀಪಕ್ಕೆ ಬಂದರೆ ನೀವೂ ನಿರಾಕರಿಸಿದಿರಿ. ಇನ್ನು ನಾನು ಮತ್ತೊಂದು ದಾರಿಯನ್ನು ಕಂಡುಕೊಳ್ಳುವೆನು' ಎಂದು ನುಡಿದನು.

ಆ ಮಾತನ್ನು ಕೇಳಿ ವಸಿಷ್ಠ ಮುನೀಶ್ವರನ ಮಕ್ಕಳು ತ್ರಿಶಂಕುಮಹಾರಾಜನಿಗೆ'ನೀನು ಚಂಡಾಲನಾಗು ' ಎಂದ ಶಾಪವನ್ನು ಕೊಟ್ಟು ತಮ್ಮ ಆಶ್ರಮಕ್ಕೆ ಹೋದರು. ಆ ರಾತ್ರಿಯು ಕಳೆಯಲು ಮಾರನೆಯ ದಿವಸ ತ್ರಿಶಂಕುವು ಚಂಡಾಲನಾಗಿದ್ದನು. ಆತನ ಶರೀರವು ಪೂರ್ವದ ಕಾಂತಿಯನ್ನು ಕಳೆದುಕೊಂಡು ಕಪ್ಪಾಗಿತ್ತು. ಅವನು ಮಲಿನವಸ್ತ್ರವನ್ನು ಧರಿಸಿಕೊಂಡು ಕೆದರಿದ ತಲೆಯುಳ್ಳವನಾಗಿ ನಾನಾವರ್ಣದ ಪುಷ್ಪಮಾಲಿಕೆಯನ್ನು ಧರಿಸಿಕೊಂಡು ಕಬ್ಬಿಣದ ಆಭರಣಗಳಿಂದಲಂಕರಿಸಿಕೊಂಡಿದ್ದನು. ಹಾಗೆ ಚಂಡಾಲಸ್ವರೂಪನಾಗಿರಲು ಆತನ ಸಮೀಪದಲ್ಲಿದ್ದ ಮಂತ್ರಿಗಳೂ ಪುರಜನಗಳೂ ಆತನನ್ನು ಬಿಟ್ಟು ಹೋದರು. ಆ ಬಳಿಕ ತ್ರಿಶಂಕುರಾಯನು ಆ ಶಾಪದಿಂದ ದಿವಾರಾತ್ರಗಳಲ್ಲಿಯೂ ಚಿಂತಿಸುತ್ತ ವಿಶ್ವಾಮಿತ್ರಮುನೀಶ್ವರನ ಸಮಾಪಕ್ಕೆ ಹೋದನು. ಧಾರ್ಮಿಕನಾಗಿ ಅತಿತೇಜಸ್ವಿಯಾದ ವಿಶ್ವಾಮಿತ್ರಮುನಿಯು ತ್ರಿಶಂಕುರಾಜನಿಗೆ ಯಾಗವು ಕೈಗೂಡದೆ ಚಂಡಾಲತ್ವವು ಬಂದದ್ದನ್ನು ಕೇಳಿ ಕನಿಕರಗೊಂಡನು. ಆ ರಾಜನನ್ನು ನೋಡಿ 'ಎಲೈ ಅಯೋಧ್ಯಾ

ಪಟ್ಟಣಕ್ಕೆ ಅಧಿಪತಿಯಾದ ತ್ರಿಶಂಕುರಾಜನೆ, ಶಾಪದಿಂದ ಚಂಡಾಲಕ್ಷ್ಯವು ಬರಲು ನೀನು ಇಲ್ಲಿಗೆ ಬಂದ ಕಾರಣವೇನು ' ಎಂದು ಕೇಳಿದನು.

ಮುಂದುವರಿಯುವುದು...

# ಇಂದಿನಿಂದ ಧನುರ್ಮಾಸ ಪೂಜೆ ಆರಂಭ

• ಉದಯವಾಹಿನಿ, ವಿಶೇಷ

**ನಾರಾಯಣಾಯ ಪರಿಪೂರ್ಣ ಗುಣಾರ್ಣವಾಯ**
**ವಿಶ್ವೋದಯಸ್ಥಿತಿಲಯೋನ್ನಿಯತಿಪ್ರಧಾಯ।**
**ಜ್ಞಾನ ಪ್ರಧಾಯ ವಿಭುಧಾಸುರಸೌಖ್ಯದುಖಃ**
**ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥**

ಇಂದಿನಿಂದ ಧನುರ್ಮಾಸ ಪೂಜೆ ಆರಂಭ. ಸೂರ್ಯನು ವೃಶ್ಚಿಕ ರಾಶಿಯಿಂದ ಧನಸ್ಸು ರಾಶಿಗೆ ಪ್ರವೇಶಿಸಿದ ನಂತರ, ಒಂದು ತಿಂಗಳ ಕಾಲ ಈ ರಾಶಿಯಲ್ಲೇ ಸಂಚರಿಸುತ್ತಾನೆ. ಹಾಗಾಗಿ ಈ ತಿಂಗಳನ್ನು ಧನುರ್ಮಾಸ ಎನ್ನಲಾಗುತ್ತದೆ.

ಇದಲ್ಲದೇ ಈ ತಿಂಗಳಲ್ಲಿ ಚಳಿ ಹೆಚ್ಚು. ದೇಹವನ್ನು ಗಡ ಗುಟ್ಟಿಸುವ ಚಳಿ ಮನುಷ್ಯನನ್ನು ವಿಪರೀತವಾಗಿ ಬಾಧಿಸುತ್ತದೆ. ಕೊರೆಯುವ ಚಳಿಗೆ ಮನುಷ್ಯ ಬಿಲ್ಲಿ(ಧನಸ್ಸು)ನಂತೆ ಬಾಗಿ ಮುದುಡಿ ಮಲಗುತ್ತಾನೆ. ಹಾಗಾಗಿ ಈ ತಿಂಗಳನ್ನು ಧನುರ್ಮಾಸ ಎಂದು ವ್ಯಾಖ್ಯಾನಿಸಬಹುದು.

ಸೂರ್ಯನು ಸೋಮವಾರ ಧನಸ್ಸು ರಾಶಿಯನ್ನು ಪ್ರವೇಶಿಸಿದ್ದು, ಮಂಗಳವಾರ ಮುಂಜಾನೆಯಿಂದಲೇ ಧನುರ್ಮಾಸ ಪೂಜೆ ಆರಂಭವಾಗುತ್ತಿದೆ. ದೇವತೆಗಳಿಗೆ ಉತ್ತರಾಯಣ ಕಾಲದ ಆರು ತಿಂಗಳು ಹಗಲಾದರೇ, ದಕ್ಷಿಣಾಯನದ ಇನ್ನಾರು ತಿಂಗಳಕಾಲ ರಾತ್ರಿಯಾಗಿದೆ. ದಕ್ಷಿಣಾಯನ ಪುಣ್ಯಕಾಲ(ಕಟಕ ಸಂಕ್ರಮಣದ) ನಂತರ ಬರುವ ಆಷಾಢ ಮಾಸದ ಪ್ರಥಮ ಏಕಾದಶಿಯಂದು ಶ್ರೀಹರಿ ಯೋಗನಿದ್ರೆಗೆ ಜಾರುತ್ತಾನೆ. ನಂತರ ಕಾರ್ತೀಕ ಮಾಸದಲ್ಲಿ ಬರುವ ಉತ್ಥಾನದ್ವಾದಶಿಯಂದು ಯೋಗನಿದ್ರೆಯಿಂದ ಮೇಲೇ ಳುತ್ತಾನೆ. ನಂತರದ ದಿನಗಳಲ್ಲಿ ಆರಂಭಗೊಳ್ಳುವ ಧನುರ್ಮಾಸದ ನಂತರ ಮಕರಸಂಕ್ರಮಣ ನಡೆಯಲಿದ್ದು, ಅಂದಿನಿಂದ ಉತ್ತರಾಯಣ ಕಾಲ ಆರಂಭವಾಗುತ್ತದೆ. ಈ ಕಾಲ ದೇವತೆಗಳಿಗೆ ಹಗಲು ವೇಳೆಯಾದ ಕಾರಣ, ಧನುರ್ಮಾಸ ಅರುಣೋದಯ(ಸೂರ್ಯ ಉದಯಿಸುವ ಮೊದಲಿನ ಸಮಯ) ಕಾಲ. ಈ ಅರುಣೋದಯ ಸಮಯ ಒಂದು ರೀತಿ ''ಬ್ರಾಹ್ಮೀ'' ಮುಹೂರ್ತವಿದ್ದಂತೆ, ಆದ್ದರಿಂದ ಈ ವೇಳೆ ಶ್ರೀಹರಿಯನ್ನು ಪೂಜಿಸಲು ಅತ್ಯಂತ ಪ್ರಶಸ್ತ ಕಾಲ ಎನಿಸಿದೆ. ಈ ಒಂದು ತಿಂಗಳ ಕಾಲ ಮುಂಜಾನೆ ಎದ್ದು, ಸ್ನಾನ ಮಾಡಿ ಶುಚಿರ್ಭೂತರಾಗಿ ದೇವರ ಪೂಜೆ ಮಾಡಬೇಕು. ಆಕಾಶದಲ್ಲಿ ನಕ್ಷತ್ರ ಕಾಣಿಸುವ ಸಮಯದಲ್ಲಿ ಮಾಡಿದ ಪೂಜೆ ಅತ್ಯಂತ ಶ್ರೇಷ್ಠ ಎನಿಸುತ್ತದೆ.



ಶಾಸ್ತ್ರಕಾರರ ಪ್ರಕಾರ ಸೂರ್ಯೋದಯದ ನಂತರದ ಪೂಜೆ ನಿಷ್ಫಲ ಎನ್ನಲಾಗಿದೆ. ಹಾಗಾಗಿ ಈ ತಿಂಗಳಲ್ಲಿ ಭೂಮಿಪೂಜೆ, ಗೃಹಪ್ರವೇಶ, ಮದುವೆ ಮತ್ತಿತರ ಶುಭಕಾರ್ಯ ನಡೆಸುವಂತಿಲ್ಲ. ಈ ತಿಂಗಳಲ್ಲಿ ಪ್ರತಿನಿತ್ಯ ದೇವರಿಗೆ ಮುದ್ಗಾನ್ನ (ಹೆಸರು ಬೇಳೆ ಹುಗ್ಗಿ) ನೈವೇದ್ಯ ಸಮರ್ಪಿಸಬೇಕು. ಧನುರ್ಮಾಸದಲ್ಲಿ ಹುಗ್ಗಿಯ ನೈವೇದ್ಯ ಮಾಡಿದರೆ ಶ್ರೀಹರಿ ಅತಿ ಹೆಚ್ಚು ಸಂತೋಷ ಪಡುತ್ತಾನಂತೆ. ಈ ಮಾಸದಲ್ಲಿ ವ್ರತಾಚರಣೆ, ಧ್ಯಾನ, ದಾನ ಮುಂತಾದುವುಗಳನ್ನು ಆಚರಿಸುವುದರಿಂದ ದೊರಕುವ ಫಲಕ್ಕಿಂತ ಅಧಿಕ ಫಲ ಹುಗ್ಗಿ ನಿವೇದಿಸುವುದರಿಂದ ಪ್ರಾಪ್ತಿಯಾಗುತ್ತದೆ ಎನ್ನಲಾಗಿದೆ. ಹಿಂದೆ ದೇವೇಂದ್ರ ಸ್ಥಾನ ಭ್ರಷ್ಟನಾಗಿ ದರಿದ್ರನಾಗುತ್ತಾನೆ. ಆಗ ಆತನ ಪತ್ನಿ ಶಚಿದೇವಿ ಧನುರ್ಮಾಸದಲ್ಲಿ ಶ್ರೀ ಹರಿಗೆ ಮುದ್ಗಾನ್ನವನ್ನು ಸಮರ್ಪಿಸಿ, ಶ್ರೀಮಹಾಲಕ್ಷ್ಮಿಯ ದ್ವಾದಶ ನಾಮ ಪಠಿಸಿದ್ದರಿಂದ ದೇವೇಂದ್ರನಿಗೆ ತನ್ನ ಸ್ಥಾನದ ಜತೆ ಐಶ್ವರ್ಯ ಪ್ರಾಪ್ತಿಯಾಯಿತು. ಹುಗ್ಗಿಗೆ ಈ ಮಾಸದಲ್ಲಿ ಅಂತಹ ಮಹತ್ವವಿದೆ. ಅಕ್ಕಿ ಮತ್ತು ಹೆಸರುಬೇಳೆಯನ್ನು ಸಮ ಪ್ರಮಾಣದಲ್ಲಿ ಸೇರಿಸಿ ಬೇಯಿಸಿ, ಇದರ ಜತೆ ಸ್ವಲ್ಪ ಬೆಲ್ಲ, ಶುಂಠಿ, ತುಪ್ಪ, ಮೆಣಸು ಸೇರಿಸಿ ಹುಗ್ಗಿ ತಯಾರಿಸಬೇಕು. ಕೆಲವರು ಜೀರಿಗೆ, ತುಪ್ಪ ಅಥವಾ ಬೆಣ್ಣೆಯಲ್ಲಿ ಹುರಿದ ಗೇರುಬೀಜ(ಗೋಡಂಬಿ) ಮಿಶ್ರಣ ಮಾಡುತ್ತಾರೆ. ಬೆಣ್ಣೆ ಸೇರಿಸಿ ಮಾಡುವ ಈ ಹುಗ್ಗಿಯನ್ನು ತಮಿಳುನಾಡಿನಲ್ಲಿ ವೆಣ್ ಪೊಂಗಲ್ ಎನ್ನುತ್ತಾರೆ.

**ಈ ತಿಂಗಳಲ್ಲಿ ಸುರಿವ ಹಿಮದಿಂದ ಮುಂಜಾನೆ ಎದ್ದು ಧಾರ್ಮಿಕ ಕಾರ್ಯದಲ್ಲಿ ತೊಡಗುವ ಜನರ ಜತೆ ಉಳಿದವರ ಕೈ, ಕಾಲು ಮುಖ ಒಡೆಯುವ ಸಾಧ್ಯತೆ ಹೆಚ್ಚು. ಅದರಲ್ಲೂ ನಮ್ಮ ದಕ್ಷಿಣ ಭಾರತದ ಸಾಕಷ್ಟು ಮಂದಿ ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಉಷಃ ಕಾಲದಲ್ಲಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ ನಂತರ ಅಶ್ವತ್ಥಕಟ್ಟೆಯನ್ನು ಪ್ರದಕ್ಷಿಣೆ ಮಾಡುವುದು ವಾಡಿಕೆ. ಇವರ ಚರ್ಮ ಸುಕ್ಕಾಗುವುದು ಸಾಮಾನ್ಯ. ಇದಲ್ಲದೇ ಚಳಿ ಈ ಮಾಸದಲ್ಲಿ ಎಲ್ಲಾರ ದೇಹವನ್ನು ಬಿಲ್ಲಿನಂತೆ ಮುದುಡಿಸುತ್ತದೆ. ಹಾಗಾಗಿ ಈ ಎರಡೂ ಸಮಸ್ಯೆಗಳಿಂದ ಮುಕ್ತಿ ಕಾಣಲು ದೇಹಕ್ಕೆ ಹದವಾದ ಬಿಸಿ ಅಗತ್ಯವಿದೆ.**

ಈ ಹುಗ್ಗಿಯ ಜೊತೆಗೆ ಹುಣಿಸೆ ಗೊಜ್ಜು ಸೇರಿಸಿ ಸವಿದರೆ ಆಹ್ಹಾ, ರುಚಿಯೋ ರುಚಿ. ಹುಗ್ಗಿ ಧಾರ್ಮಿಕ ರೀತಿಯಲ್ಲಿ ಪ್ರಸಾದವಾದರೆ, ಇದನ್ನು ಈ ಮಾಸದಲ್ಲಿ ಸೇವಿಸಲು ಕೆಲ ವೈಜ್ಞಾನಿಕ ಕಾರಣಗಳಿವೆ. ಧನುರ್ಮಾಸ ಹೇಮಂತ ಋತುವಿನ ತಿಂಗಳು, ಅತಿ ತೀಕ್ಷ್ಣವಾದ ಚಳಿಗಾಲ. ಈ ವೇಳೆ ಬೀಳುವ ಇಬ್ಬನಿ ನಮ್ಮ ದೇಹದ ಸ್ವೇದಬಿಂದುಗಳ ಮೂಲಕ ಒಳ ಸೇರುವಷ್ಟು ಪ್ರಭಾವಶಾಲಿ. ಕೆಲ ಪದಾರ್ಥಗಳಲ್ಲಿ ಬಿಸಿಲು ಕಾಲದಲ್ಲಿ ತಂಪು ನೀಡುವ ಹಾಗೇಯೇ ಶೀತ ಕಾಲದಲ್ಲಿ ಉಷ್ಣತೆ ಒದಗಿಸುವ ಗುಣವಿದೆ.

ಹೆಸರುಬೇಳೆಯಲ್ಲಿ ಇಂತಹ ಗುಣವಿದೆ. ಇದರ ಜತೆ ದೇಹ ಮತ್ತಷ್ಟು ಬಿಸಿ ಹಾಗೂ ಹುರುಪು ಬರಲು, ಮುಖದಲ್ಲಿ ಕಾಂತಿ ಹೆಚ್ಚಿಸುವುದರೊಂದಿಗೆ ಅಜೀರ್ಣ ತಡೆಯಲು ಉಳಿದ ಪದಾರ್ಥಗಳಾದ ತುಪ್ಪ, ಜೀರಿಗೆ, ಶುಂಠಿ, ಮೆಣಸು, ಬೆಣ್ಣೆ ನೆರವಾಗುತ್ತವೆ. ಹಾಗಾಗಿ ಹುಗ್ಗಿ ಚಳಿಗಾಲಕ್ಕೆ ಹೇಳಿ ಮಾಡಿಸಿದ ಆಹಾರ. ಇದನ್ನು ದೇವರಿಗೆ ಸಮರ್ಪಿಸಿ ನಂತರ ಬಿಸಿ ಬಿಸಿ ಭುಂಜಿಸಿದರೆ, ಸಿಗುವ ಮಜವೇ ಬೇರೆ. ಇದು ನಮ್ಮ ಪೂರ್ವಿಕರು ಕಂಡುಕೊಂಡ ಸತ್ಯ.

ಹಾಗೇ, ಬೆಲ್ಲದ ಜತೆ ಹೆಸರುಬೇಳೆ, ಅಕ್ಕಿ, ತುಪ್ಪ, ದ್ರಾಕ್ಷಿ, ಗೋಡಂಬಿ, ಏಲಕ್ಕಿ, ಒಣಕೊಬ್ಬರಿ, ಪಚ್ಚಕರ್ಪೂರ, ಕೇಸರಿ ಸೇರಿಸಿ ತಯಾರಿಸುವ ಗುಡಾನ್ನ(ಸಿಹಿ ಪೊಂಗಲ್) ಸಹ ಈ ಮಾಸದಲ್ಲಿ ಶ್ರೀಹರಿಗೆ ನಿವೇದಿಸುವುದು ವಿಶೇಷ. ಅತ್ತ ಒಗರು ಮಿಶ್ರಿತ ಖಾರ, ಜತೆಗೆ ಸಿಹಿ ಭರಿತ ಸ್ವಾದವುಳ್ಳ ಗುಡಾನ್ನ ಸೇವನೆ ಆರೋಗ್ಯಕರವಾದುದು.

ಒಟ್ಟಿನಲ್ಲಿ ಬೇಸಿಗೆ ಕಾಲದ ಬಿಸಿಲಲ್ಲಿ ಬೆಂಗಾಡಿನ ಅನುಭವ, ಮಳೆಗಾಲದ ಮಳೆಯಲ್ಲಿ ವನಸಿರಿಯ ಸಂಪತ್ತಿನ ಸೊಬಗು ಹಾಗೂ ಚಳಿಗಾಲದ ಚಳಿಯಲ್ಲಿ ಮುಂಜಾನೆ ಸುರಿವ ಮಂಜಿನ ಸಿಂಚನ. ಈ ಮೂರು ಕಾಲಗಳಲ್ಲಿ ಕಾಣುವ ಪ್ರಕೃತಿ ಸೌಂದರ್ಯವನ್ನು ಮಾನವ ಅನುಭವಿಸಬೇಕು ಎಂಬುದು ಹಿರಿಯರ ಅಭಿಮತ. ಈ ಮೂರು ಕಾಲಗಳಲ್ಲಿ ಸೊಬಗು ಸವಿಯುವುದರ ಜತೆ ಸಕಾಲದಲ್ಲಿ ಚರ್ಮದ ಆರೋಗ್ಯ ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು ಹಾಗೂ ಆಹಾರ ಪದ್ಧತಿಯನ್ನು ಋಷಿ ಮುನಿಗಳು ಸೂಚಿಸಿದ್ದಾರೆ.


ಹಾಗಾಗಿ, ಒಂದು ತಿಂಗಳು ಧನುರ್ಮಾಸ ವ್ರತವನ್ನು ಮಾಡಿ, ದೇಹದ ಜಾಡ್ಯವನ್ನು ತೊಲಗಿಸಿ. ಹುಗ್ಗಿ ಆಹಾರ ಸೇವಿಸಿ, ಸದೃಢ ಆರೋಗ್ಯ ಪಡೆಯೋಣ.

**ಶ್ರೀಶ ಚರಣಾರಾಧಕ:**
**ಕೆ.ವಿ.ಲಕ್ಷ್ಮೀನಾರಾಯಣಾಚಾರ್ಯ,**

# ಹೊಸ ವರ್ಷದಿಂದ ಭಿಕ್ಷೆ ನೀಡುವ ಮುನ್ನ ಎಚ್ಚರ: ಬೀಳುತ್ತೆ ಎಫ್ಐಆರ್

## ಭಿಕ್ಷುಕರಿಗೆ ಭಿಕ್ಷೆ ನೀಡಿದರೆ ಕಾನೂನು ಕ್ರಮ, ಜೈಲಿಗೆ ಕಳುಹಿಸುವುದಾಗಿ ಎಚ್ಚರ, ಇಂದೋರ್ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸ ಕಾನೂನು

**ಇಂದೋರ್:** ಮಧ್ಯ ಪ್ರದೇಶದ ಇಂದೋರ್ ಜಿಲ್ಲಾಡಳಿತ ಹೊಸ ಪ್ರಯತ್ನಕ್ಕೆ ಮುಂದಾಗುತ್ತಿದೆ. ಹೊಸ ವರ್ಷದಿಂದ ಹೊಸ ಕಾನೂನನ್ನು ಜಾರಿಗೆ ತರುವುದಾಗಿ ತಮ್ಮ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ. ಈ ಬಗ್ಗೆ, ಸ್ಥಳೀಯ ನಾಗರೀಕರಿಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಿದೆ. ಜನವರಿ 1, 2025ರಿಂದ ಅನ್ವಯವಾಗುವಂತೆ, ಇಂದೋರ್ ಜಿಲ್ಲಾ ವ್ಯಾಪ್ತಿಯಲ್ಲಿನ ಭಿಕ್ಷುಕರಿಗೆ ಭಿಕ್ಷೆ ನೀಡುವುದು ಅಥವಾ ಇನ್ಯಾವುದಾದರೂ ರೀತಿಯಲ್ಲಿ ಸಹಾಯ ಹಸ್ತ ಚಾಚುವುದನ್ನು ನಿಷೇಧಿಸಿ, ಜಿಲ್ಲಾಡಳಿತ ಆದೇಶ ಹೊರಡಿಸಿದೆ. ಜಿಲ್ಲೆಯಲ್ಲಿರುವ ಭಿಕ್ಷುಕರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.




**ಕಾನೂನು ಕ್ರಮವನ್ನು ಎದುರಿಸ ಬೇಕಾದಿತು**

ಡಿಸೆಂಬರ್ 17 ರಿಂದ ಡಿ. 31 ರ ವರೆಗೆ ಸತತವಾಗಿ, ಹೊಸ ಕಾನೂನಿನ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಯಲಿವೆ. ಒಂದೊಳ್ಳೆ ಸದುದ್ದೇಶವನ್ನು ಇಟ್ಟುಕೊಂಡು ಈ ಕಾನೂನು ಜಾರಿಗೆ ತರಲಿದ್ದೇವೆ ಎಂದು ಡಿಸಿ ಹೇಳಿದ್ದಾರೆ. ಜನವರಿ 1ನೇ ತಾರೀಕಿ ನಿಂದ, ಭಿಕ್ಷೆ ನೀಡುವವರ ವಿರುದ್ಧ ಎಫ್ಐಆರ್ ದಾಖಲಿಸಲಾಗುವುದು. ಭಿಕ್ಷೆ ನೀಡುವ ಪದ್ದತಿಯನ್ನೇ ನಾದರೂ ನೀವು ಪಾಲಿಸಿಕೊಂಡು ಬರುತ್ತಿದ್ದರೆ, ಅದನ್ನು ನಿಲ್ಲಿಸಿ. ಜನರಿಗೆ ಭಿಕ್ಷೆ ನೀಡುವ ಮೂಲಕ ಪಾಪದಲ್ಲಿ ಪಾಲುದಾರರಾಗ ಬೇಡಿ ಎಂದು ಡಿಸಿ ಆಶಿಸ್ ಸಿಂಗ್ ಹೇಳಿದ್ದಾರೆ.

### ಹೊಸ ಕ್ರಮಕ್ಕೆ ಮುಂದು

**ಭಿಕ್ಷಾಟನೆಗೆ ಮೂಲ ಕಾರಣವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ, ಮುಂದಿನ ವರ್ಷದ ಮೊದಲ ದಿನದಿಂದಲೇ ಭಿಕ್ಷೆ ನೀಡುವುದನ್ನೂ ಬ್ಯಾನ್ ಮಾಡಲಾಗಿದೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಪೈಲಟ್ ಯೋಜನೆಯಂತೆ, ಮಧ್ಯ ಪ್ರದೇಶದ ಇಂದೋರ್‌ನಲ್ಲಿ ಈ ಹೊಸ ಕ್ರಮಕ್ಕೆ ಜಿಲ್ಲಾಡಳಿತ ಮುಂದಾಗಿದೆ.**

> **ಹೊಸ ವರ್ಷದ ಮೊದಲ ದಿನದಿಂದಲೇ ಈ ಹೊಸ ಕಾನೂನು ಜಾರಿಗೆ ಬರಲಿದೆ. ಜಿಲ್ಲಾಡಳಿತ ಆದೇಶದ ಹೊರತಾಗಿಯೂ, ಭಿಕ್ಷುಕರಿಗೆ ಸಹಾಯವನ್ನು ಮಾಡುವುದು ಗಮನಕ್ಕೆ ಬಂದಿದ್ದೇ ಆದಲ್ಲಿ, ಕಾನೂನು ಕ್ರಮವನ್ನು ಎದುರಿಸಬೇಕಾದಿತು**
>
> **-ಆಶಿಸ್ ಸಿಂಗ್**
> **ಇಂದೋರ್ ಜಿಲ್ಲಾಧಿಕಾರಿ**

ಮಕ್ಕಳನ್ನು, ಮಹಿಳೆಯರನ್ನು ಅಥವಾ ವೃದ್ದರನ್ನು ಭಿಕ್ಷಾ ಟನೆಗೆ ದೂಡುವ ಜಾಲವೊಂದನ್ನು ಇತ್ತೀಚೆಗೆ ಇಂದೋರ್ ಪೊಲೀಸರು ಬೇಧಿಸಿದ್ದರು. ಈ ಜಾಲದಿಂದ ಹಲವರನ್ನು ರಕ್ಷಿಸಿ, ಬಲವಂತವಾಗಿ ಭಿಕ್ಷಾಟನೆಗೆ ದೂಡಿದವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾಡಳಿತ ಹೇಳಿದೆ.

ಇಂತಹ ಜಾಲಕ್ಕೆ ಸಿಲುಕಿದವರನ್ನು ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಪೈಲಟ್ ಪ್ರಾಜೆಕ್ಟ್ ಇದಾಗಿದೆ. ಭಾರತದ 10 ನಗರಗಳನ್ನು ಭಿಕ್ಷುಕ ಮುಕ್ತ ನಗರವನ್ನಾಗಿಸುವ ಯೋಜನೆ ಇದಾಗಿದೆ, ಅದರಲ್ಲಿ ಇಂದೋರ್ ಕೂಡಾ ಒಂದು. ಭಿಕ್ಷಾಟನೆಯ ಮೂಲ ಕಾರಣವೇನು, ಬಡ ತನವೇ ಅಥವಾ ಬಲವಂತವಾಗಿ ಇಂತಹ ಕೆಲಸವನ್ನು ಮಾಡಿಸಲಾಗುತ್ತಿದೆಯೇ ಮುಂತಾದ ಭಿಕ್ಷಾಟನೆಯ ಮೂಲ ಕಾರಣಗಳನ್ನು ಕಂಡುಕೊಳ್ಳುವುದಕ್ಕೆ ಇದು ಸಹಕಾರಿಯಾಗಲಿದೆ. ಮತ್ತು ಇದಕ್ಕೆ ದೀರ್ಘಾವಧಿಯ ಪರಿಹಾರಕ್ಕೆ ಇಂತಹ ಕ್ರಮಗಳು ಸಹಕಾರಿಯಾಗಲಿದೆ ಎಂದು ಇಂದೋರ್ ಡಿಸಿ ಹೇಳಿದ್ದಾರೆ.

# ಪೆಸಿಫಿಕ್ ದ್ವೀಪ ರಾಷ್ಟ್ರ ವನವಾಟುನಲ್ಲಿ ಪ್ರಭಲ ಭೂಕಂಪನ

**ವೆಲ್ಲಿಂಗ್ಟನ್:** ದಕ್ಷಿಣ ಪೆಸಿಫಿಕ್ ಮಹಾಸಾಗರದ ವನವಾಟು ತೀರದಲ್ಲಿ ಮಂಗಳವಾರ 7.3 ತೀವ್ರತೆಯ ಭೂಕಂಪ ಸಂಭವಿಸಿದೆ. ಭೂಕಂಪವು 57 ಕಿಲೋಮೀಟರ್ ಆಳದಲ್ಲಿ ಸಂಭವಿಸಿದೆ ಮತ್ತು ದ್ವೀಪ ರಾಷ್ಟ್ರದ ಅತಿದೊಡ್ಡ ನಗರವಾದ ಪೋರ್ಟ್ ವಿಲಾದಿಂದ ಪಶ್ಚಿಮಕ್ಕೆ 30 ಕಿಲೋಮೀಟರ್ ದೂರದಲ್ಲಿ ಕೇಂದ್ರೀಕೃತವಾಗಿತ್ತು. ಕಂಪನದ ನಂತರ ಅದೇ ಸ್ಥಳದ ಬಳಿ 5.5ರ ತೀವ್ರತೆಯ ಕಂಪನ ರಿಕ್ಟರ್ ಮಾಪನದಲ್ಲಿ ದಾಖಲಾಗಿದೆ ಎಂದು ಅಮೆರಿಕದ ಹವಾಮಾನ ಇಲಾಖೆ ವರದಿ ಮಾಡಿದೆ.

ಹಾನಿಯ ಬಗ್ಗೆ ತಕ್ಷಣವೇ ಸ್ಪಷ್ಟವಾಗಿಲ್ಲ, ಆದರೆ ಭೂಕಂಪದ ನಂತರ ವನವಾಟು ಸರ್ಕಾರದ ವೆಬ್ ಸೈಟ್‌ಗಳು ಆಫ್‌ಲೈನ್‌ನಲ್ಲಿವೆ ಮತ್ತು ಪೊಲೀಸ್ ಮತ್ತು ಇತರ ಸಾರ್ವಜನಿಕ ಏಜೆನ್ಸಿಗಳ ಫೋನ್ ಸಂಖ್ಯೆಗಳು ಸಂಪರ್ಕಕ್ಕೆ ಸಿಗುತ್ತಿಲ್ಲ. ದೇಶದ ಜಿಯೋಹಾಜಾರ್ಡ್ಸ್ ಏಜೆನ್ಸಿ ಮತ್ತು ಪ್ರಧಾನ ಮಂತ್ರಿ ಕಚೇರಿಯ ಸಾಮಾಜಿಕ ಮಾಧ್ಯಮ ಚಾನಲ್‌ಗಳು ಕೂಡ ಬಂದ್ ಆಗಿದೆ.ಆದರೆ ಕೆಲವು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾದ ವೀಡಿಯೊವು ವನವಾಟುವಿನ ಕೆಲವು ರಾಜತಾಂತ್ರಿಕ ಕಟ್ಟಡವನ್ನು ತೋರಿಸುತ್ತದೆ ಅಲ್ಲಿನ ಬ್ರಿಟನ್, ಫ್ರಾನ್ಸ್ ಮತ್ತು ನ್ಯೂಜಿಲೆಂಡ್ ಸೇರಿದಂತೆ ಹಲವು ಟ್ಟಡಗಳು ಹಾನಿಯಾಗಿದೆ, ಸುಮಾರು ಮೂರೂವರೆ ಲಕ್ಷ ಜನ ರಿಗೆ ನೆಲೆಯಾಗಿರುವ 80 ದ್ವೀಪಗಳ ಸಮೂಹವಾದ ವನವಾಟುದಲ್ಲಿನ ಕೆಲವು ಕರಾವಳಿಗಳಿಗೆ ಸುನಾಮಿ ಅಲೆಗಳ ಬಗ್ಗೆ ಎಚ್ಚರಿಸಿದೆ. ಕಡಲ ಅಲೆಗಳ ಅಬ್ಬರ ಹೆಚ್ಚಾಗಲಿದೆ ಎಂದು ತಿಳಿಸಿದೆ.



> **ತಗ್ಗು ಪ್ರದೇಶದ ಕೆಲವು ದ್ವೀಪಗಳು ಸಮುದ್ರ ಮಟ್ಟದಿಂದ ಕೇವಲ 3 ಅಡಿ ಎತ್ತರದಲ್ಲಿದೆ. ಪಪುವಾ ನ್ಯೂಗಿನಿಯಾ, ಫಿಜಿ ಮತ್ತು ಸೊಲೊಮನ್ ದ್ವೀಪ ಗಳು ಸೇರಿದಂತೆ ಹಲವಾರು ಹತ್ತಿರದ ಪೆಸಿಫಿಕ್ ದ್ವೀಪ ರಾಷ್ಟ್ರಗಳಿಗೆ ಸುನಾಮಿ ಅಲೆಗಳ ಬಗ್ಗೆ ಎಚ್ಚರಿಸಲಾಗಿದೆ. ಪೆಸಿಫಿಕ್ ಮಹಾಸಾಗರದಲ್ಲಿ ನೆಲೆಗೊಂಡಿರುವ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನ ಅಧಿಕಾರಿಗಳು ನಮ ಕರಾವಳಿಯಲ್ಲಿ ಯಾವುದೇ ಸುನಾಮಿ ಬೆದರಿಕೆ ಇಲ್ಲ ಎಂದು ಹೇಳಿದ್ದಾರೆ.**

ನ್ಯೂಜಿಲೆಂಡ್‌ನ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ವನವಾಟುವಿನಲ್ಲಿದ್ದು ಪ್ರಜೆಗಳ ಸ್ಥಿತಿಯ ಬಗ್ಗೆ ವಿವರಗಳನ್ನು ನೀಡಿಲ್ಲ.

# ಪಾನಮತ್ತ 16ರ ಬಾಲಕನಿಂದ ಗುಂಡಿಕ್ಕಿ ನಾಲ್ವರ ಹತ್ಯೆ

**ಮೆಕ್ಸಿಕೋ ಸಿಟಿ:** ಪಾನಮತ್ತನಾಗಿದ್ದ 16 ವರ್ಷದ ಬಾಲಕನೊಬ್ಬ ತನ್ನ ತಂದೆ, ತಾಯಿ, ಸಹೋದರ ಹಾಗೂ ಸಹೋದರಿಯನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಉತ್ತರ ಅಮೆರಿಕದ ಮೆಕ್ಸಿಕೋದಲ್ಲಿ ನಡೆದಿದೆ. ಮೆಕ್ಸಿಕೋದ ವೆಲೆನ್ಸಿಯಾ ಕೌಂಟಿ ವ್ಯಾಪ್ತಿಯಲ್ಲಿ ಕಳೆದ ಶನಿವಾರ ಬೆಳಿಗ್ಗೆ 3.30 ರ ಸುಮಾರು ಈ ಘಟನೆ ನಡೆದಿದೆ ಎಂದು ನ್ಯೂ ಮೆಕ್ಸಿಕೋ ಸ್ಟೇಟ್ ಪೊಲೀಸ್ ಅಧಿಕಾರಿಗಳು ತಿಳಿಸಿರುವುದು ವರದಿಯಾಗಿದೆ. ಘಟನೆಗೆ ಸಂಬಂಧಿಸಿದಂತೆ ಬಾಲಕ ಡಿಗೊ ಲೇವಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಸ್ಥಳಕ್ಕೆ ದೌಡಾಯಿಸಿದಾಗ ಬಾಲಕ ಎರಡೂ ಕೈ ಮೇಲೆತ್ತಿ ಪೊಲೀಸರಿಗೆ ಶರಣಾಗಿದ್ದಾನೆ. ಬಂಧನ ವೇಳೆ ಆತ ವಿಪರೀತ ಕುಡಿದಿದ್ದ. ಹತ್ಯೆ ಮಾಡಲು ಕಾರಣ ಏನು ಎಂಬುದು ಇನ್ನೂ ದೃಢಪಟ್ಟಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಈ ಕುರಿತು ನ್ಯೂಸ್ 18 ಮಾಧ್ಯಮ ವರದಿ ಮಾಡಿದೆ.



> **ಮೃತರನ್ನು ಡಿಗೊ ತಂದೆ ಲಿಯೋನಾರ್ಡೊ (42) ತಾಯಿ ಅಡ್ರಿನಾ ಬೆನ್‌ಮೊ (35) ಸಹೋದರಿ ಅಡ್ರಿನಾ (18) ಸಹೋದರ ಅಲೆಕ್ಸಾಂಡರ್ (14) ಎಂದು ಗುರುತಿಸಲಾಗಿದೆ. ಶನಿವಾರ ಬೆಳಿಗ್ಗೆ ಪೊಲೀಸರಿಗೆ ಕರೆ ಮಾಡಿದ ಡಿಕೊ ಲೇವಿ ತಾನು ತನ್ನ ತಂದೆ ತಾಯಿ ಸಹೋದರ ಹಾಗೂ ಸಹೋದರಿಯನ್ನು ಹ್ಯಾಂಡ್‌ಗನ್ ನಿಂದ ಗುಂಡಿಕ್ಕಿ ಹತ್ಯೆ ಮಾಡಿದ್ದೇನೆ ಎಂದು ತಿಳಿಸಿದ್ದ. ಸದ್ಯ ಬಂಧಿತನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.**

# ಮುಖೇಶ್ ಖನ್ನಾ ವಿರುದ್ಧ ಸೋನಾಕ್ಷಿ ಕಿಡಿ

**ಮುಂಬೈ:** ಮಹಾಭಾರತ ಧಾರಾವಾಹಿಯ ಭೀಷ್ಮ ಪಾತ್ರಧಾರಿ ಮುಖೇಶ್ ಖನ್ನಾ ತಮ್ಮ ಹೇಳಿಕೆಗಳಿಗೆ ಹೆಸರುವಾಸಿಯಾಗಿದ್ದಾರೆ. ಕೆಲವೊಮ್ಮೆ ಇಂಡಸ್ಟ್ರಿಯ ಯಾವುದೇ ನಟರ ವಿರುದ್ಧ ಮಾತನಾಡುತ್ತಾರೆ, ಇನ್ನು ಕೆಲವೊಮ್ಮೆ ತಾವು ನಿರ್ವಹಿಸಿದ ಶಕ್ತಿಮಾನ್ ಪಾತ್ರದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸದ್ಯ ಅವರು ಶತ್ರುಘ್ನ ಸಿನ್ಹಾ ಅವರನ್ನು ಗುರಿಯಾಗಿಸಿಕೊಂಡು ನೀಡಿದ ಹೇಳಿಕೆ ವಿವಾದಕ್ಕೆ ಗುರಿಯಾಗಿದೆ. ಸೋನಾಕ್ಷಿ ಸಿನ್ಹಾ ಅವರ ತಂದೆಗೆ ರಾಮಾಯಣ ಜ್ಞಾನದ ಕೊರತೆಯಿದೆ. ಹಾಗಾಗಿ ಮಕ್ಕಳಿಗೆ ಸರಿಯಾದ ಪೋಷಣೆ ಮಾಡಿಲ್ಲ ಎಂದು ಮುಖೇಶ್ ಖನ್ನಾ ಹೇಳಿದ್ದಾರೆ. ಇದೀಗ ಆ ಹೇಳಿಕೆಗೆ ಸೋನಾಕ್ಷಿ ಸಿನ್ಹಾ ಕಿಡಿಕಾರಿದ್ದಾರೆ. ಅವರು ಇನ್ಸ್ಟಾಗ್ರಾಮ್‌ನಲ್ಲಿ ಸುದೀರ್ಘ ಪೋಸ್ಟ್ ಬರೆದಿದ್ದಾರೆ.

ಮಹಾಕಾವ್ಯಕ್ಕೆ ಸಂಬಂಧಿಸಿದ ಪ್ರಶ್ನೆಗೆ ತಪ್ಪು ಉತ್ತರ ನೀಡಿದ ಸೋನಾಕ್ಷಿ ಸಿನ್ಹಾ ಅವರ ಪಾಲನೆಯ ಬಗ್ಗೆ ಮುಖೇಶ್ ಖನ್ನಾ ನಿನ್ನೆ ಕಿಡಿಕಾರಿದ್ದಾರೆ. ಇದೀಗ ಸೋನಾಕ್ಷಿ ಕೂಡ ನಟನಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ. ಕೌನ್ ಬನೇಗಾ ಕರೋಡ್ಪತಿಯಲ್ಲಿ ತನ್ನ ಪಕ್ಕದಲ್ಲಿ ಕುಳಿತಿದ್ದ ಇಬ್ಬರು ಮಹಿಳೆಯರು ಸಹ ಅದೇ ಪ್ರಶ್ನೆಗೆ ಉತ್ತರಿಸಲು ವಿಫಲರಾಗಿದ್ದಾರೆ. ಆದರೆ ನೀವು ನನ್ನ ಬಗ್ಗೆ ಅಷ್ಟೇ ಪ್ರಶ್ನೆ ಮಾಡಿದ್ದೀರಿ. ಇದು ನನ್ನ ಕುಟುಂಬವನ್ನು ಟೀಕಿಸಿರುವುದು ನಿಮ್ಮ ಉದ್ದೇಶವಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಮುಖೇಶ್ ಖನ್ನಾ ಅವರು ಹಳೆಯ ಸಂಚಿಕೆಯನ್ನು ಮರು-ವೀಕ್ಷಿಸುವುದನ್ನು ನಿಲ್ಲಿಸಬೇಕು ಎಂದಿದ್ದಾರೆ.

ಭಗವಾನ್ ರಾಮನು ಮಂಥರೆ, ಕೈಕೇಯಿ ಮತ್ತು ರಾವಣನನ್ನು ಹೇಗೆ ಕ್ಷಮಿಸಿದ್ದಾನೆ ಎಂದು ಎಂದು ಮಹಾಕಾವ್ಯ ರಾಮಾಯಣದಿಂದ ಅರಿತುಕೊಳ್ಳಿ, ನಿಮ್ಮಿಂದ ನಾನು ಪಾಠ ಕಲಿಯುವ ಅಗತ್ಯವಿಲ್ಲ ಮುಂದಿನ ಬಾರಿ ನೀವು ನನ್ನ ತಂದೆ ನನ್ನಲ್ಲಿ ಹುಟ್ಟು ಹಾಕಿದ ಮೌಲ್ಯಗಳ ಬಗ್ಗೆ ಏನನ್ನಾದರೂ ಹೇಳಿಕೆ ನೀಡಿದರೆ, ದಯವಿಟ್ಟು ಆ ಮೌಲ್ಯಗಳಿಂದಾಗಿ ನಾನು ಏನು ಹೇಳಿದರೂ ಅದನ್ನು ಗೌರವದಿಂದ ಹೇಳಿದ್ದೇನೆ ಎಂಬುದನ್ನು ನೆನಪಿಡಿ ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

# ಅಮರಾವತಿ ಮೂಲಸೌಕರ್ಯ ಅಭಿವೃದ್ಧಿಗೆ 24,276 ಕೋಟಿ ರೂ. ಬಿಡುಗಡೆ

**ಅಮರಾವತಿ:** ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಅಧ್ಯಕ್ಷತೆಯ ಆಂಧ್ರಪ್ರದೇಶ ರಾಜಧಾನಿ ಪ್ರದೇಶ ಅಭಿವದ್ಧಿ ಪ್ರಾಧಿಕಾರ (ಎಪಿಸಿಆರ್‌ಡಿಎ) ಗ್ರೀನ್‌ಫೀಲ್ಡ್ ರಾಜಧಾನಿ ಅಮರಾವತಿಯಲ್ಲಿ 24,276 ಕೋಟಿ ರೂ.ಗಳ ಮೂಲಸೌಕರ್ಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ ಎಂದು ಪೌರಾಡಳಿತ ಸಚಿವ ಪಿ ನಾರಾಯಣ ತಿಳಿಸಿದ್ದಾರೆ.

43ನೇ ಎಪಿಸಿಆರ್‌ಡಿಎ ಸಭೆಯಲ್ಲಿ ಟ್ರಂಕ್ ರಸ್ತೆಗಳು, ಬಡಾವಣೆಗಳು ಮತ್ತು ಐಕಾನಿಕ್ ಕಟ್ಟಡಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಅವರು ಹೇಳಿದರು.ರಾಜಧಾನಿ ಅಮರಾವತಿಯಲ್ಲಿ ಟ್ರಂಕ್ ರಸ್ತೆಗಳು, ಬಡಾವಣೆಗಳು ಮತ್ತು ಐಕಾನಿಕ್ ಭವನಗಳ (ಕಟ್ಟಡಗಳು) ನಿರ್ಮಾಣಕ್ಕೆ 24,276 ಕೋಟಿ ರೂ.ಗಳ ನಿಧಿಗೆ 43ನೇ ಸಿಆರ್‌ಡಿಎ ಸಭೆ ಅನುಮೋದನೆ ನೀಡಿದೆ ಎಂದು ನಾರಾಯಣ ಸಚಿವಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕಳೆದ ನಾಲ್ಕು ಸಿಆರ್‌ಡಿಎ ಸಭೆಗಳಲ್ಲಿ ಒಟ್ಟು 45,249 ಕೋಟಿ ರೂ.ಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಅವರು ಹೇಳಿದರು. ಗ್ರೀನ್‌ಫೀಲ್ಡ್ ರಾಜಧಾನಿಯಲ್ಲಿ ಮುಂಬರುವ ವಿಧಾನಸಭೆ ಭವನವನ್ನು 103 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುವುದು, 11.2 ಲಕ್ಷ ಚದರ ಅಡಿವರೆಗೆ ವಿಸ್ತರಿಸಲಾಗುವುದು ಮತ್ತು 250 ಮೀಟರ್ ಎತ್ತರವನ್ನು ತಲುಪಲಿದೆ ಎಂದು ನಾರಾಯಣ ಹೇಳಿದರು.



ಅಸೆಂಬ್ಲಿ ಅಧಿವೇಶನದಲ್ಲಿ ಇಲ್ಲದಿರುವಾಗ, ಜನರು ರಾಜಧಾನಿಯ ಪಕ್ಷಿನೋಟವನ್ನು ಆನಂದಿಸಲು ಕಟ್ಟಡದ ಮೇಲ್ಭಾಗಕ್ಕೆ ಭೇಟಿ ನೀಡಬಹುದು ಮತ್ತು 20.32 ಲಕ್ಷ ಚದರ ಅಡಿ ವಿಸ್ತೀರ್ಣದ ಹೈಕೋರ್ಟ್ ಕಟ್ಟಡವನ್ನು 42 ಎಕರೆ ಭೂಮಿಯಲ್ಲಿ ನಿರ್ಮಿಸಲಾಗುವುದು ಎಂದು ಅವರು ಹೇಳಿದರು. 55 ಮೀಟರ್ ಎತ್ತರ ಮತ್ತು ಎಂಟು ಮಹಡಿಗಳನ್ನು ಒಳಗೊಂಡಿದೆ.

1,048 ಕೋಟಿ ವೆಚ್ಚದಲ್ಲಿ ಹೈಕೋರ್ಟ್ ಕಟ್ಟಡವನ್ನು ನಿರ್ಮಿಸಲಾಗುವುದು ಮತ್ತು ಸಾಮಾನ್ಯ ಆಡಳಿತ ಇಲಾಖೆ (ಜಿಎಡಿ) ಕಟ್ಟಡವು 47 ಮಹಡಿಗಳು ಮತ್ತು 17 ಲಕ್ಷ ಚದರ ಅಡಿ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ ಎಂದು ನಾರಾಯಣ ಹೇಳಿದರು.

> **69 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ 4,688 ಕೋಟಿ ರೂಪಾಯಿ ವೆಚ್ಚದಲ್ಲಿ ಇನ್ನೂ ಐದು ಟವರ್‌ಗಳನ್ನು ನಿರ್ಮಿಸಲಾಗುವುದು ಎಂದು ಅವರು ಹೇಳಿದರು. ಅನುಮೋದಿತ ಮೊತ್ತದ ಪೈಕಿ 580 ಕಿ.ಮೀ.ವರೆಗಿನ ನಾಲ್ಕು ಮುಖ್ಯ ರಸ್ತೆಗಳು ಮತ್ತು ಇತರ ಸೌಲಭ್ಯಗಳಿಗೆ 9,699 ಕೋಟಿ ರೂ.ಗಳನ್ನು ಮತ್ತು ಟ್ರಂಕ್ ರಸ್ತೆಗಳಿಗೆ 7,794 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ಸಚಿವರು ಗಮನಿಸಿದರು.**


# ರಾಮನ ಸಂಪ್ರದಾಯ ಉಳಿಯಲಿದೆ, ಬಾಬರ್ ಪರಂಪರೆ ಅಳಿಯಲಿದೆ

**ಲಕ್ನೋ:** ದೇಶದಲ್ಲಿ ಭಗವಾನ್ ರಾಮ, ಕೃಷ್ಣ ಮತ್ತು ಬುದ್ಧನ ಸಂಪ್ರದಾಯಗಳು ಮಾತ್ರ ಉಳಿಯುತ್ತವೆ ಆದರೆ, ಬಾಬರ್ , ಔರಂಗಜೇಬ್‌ರ ಪರಂಪರೆ ಮರೆಯಾಗಲಿದೆ ಎಂದು ಉತ್ತರ ಪ್ರದೇಶ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್ ಭವಿಷ್ಯ ನುಡಿದಿದ್ದಾರೆ. ಘೋಷಣೆಗಳನ್ನು ಕೂಗುವುದು ಮತ್ತು ಹಿಂದೂ ರ‍್ಯಾಲಿಗಳಿಗೆ ಮುಸ್ಲಿಂ ಪ್ರಾಬಲ್ಯದ ಪ್ರದೇಶದಲ್ಲಿ ಹಾದುಹೋಗಲು ಅವಕಾಶ ನೀಡುವುದು ಕೋಮು ಗಲಭೆಯನ್ನು ಪ್ರಚೋದಿಸುತ್ತದೆ ಎಂಬ ವಿರೋಧ ಪಕ್ಷದ ಸಲಹೆಯನ್ನು ಉಲ್ಲೇಖಿಸಿ ಅವರು ವಿಧಾನ ಸಭೆಯಲ್ಲಿ ಈ ಹೇಳಿಕೆ ನೀಡಿದ್ದಾರೆ.

ಮುಸ್ಲಿಂ ಪ್ರಾಬಲ್ಯವಿರುವ ಪ್ರದೇಶದಲ್ಲಿ ಹಿಂದೂ ಮೆರವಣಿಗೆ ನಡೆಸುವಂತಿಲ್ಲ ಎಂದು ಸಂವಿಧಾನದಲ್ಲಿ ಎಲ್ಲಿ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

ಅದನ್ನು ಹೋಗಲು ಬಿಡ ಬೇಡಿ. ಮಸೀದಿಯ ಮುಂದೆ ಮೆರವಣಿಗೆಗೆ ಅವಕಾಶ ನೀಡದಿರುವುದು ನನಗೆ ಆಶ್ಚರ್ಯ ತಂದಿದೆ. ಈ ರಸ್ತೆ ಯಾರಿಗಾದರೂ ಸೇರಿದೆಯೇ? ಇದು ಸಾರ್ವಜನಿಕ ರಸ್ತೆ, ನೀವು ಯಾರನ್ನಾದರೂ ಹೇಗೆ ನಿಲ್ಲಿಸುತ್ತೀರಿ? ಎಂದು ಅವರು ಖಾರವಾಗಿ ಕೇಳಿದರು. ಬಹ್ರೈಚ್‌ನಲ್ಲಿ ಇತ್ತೀಚಿನ ಘಟನೆಯನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, ಅಲ್ಲಿ ಸಾಂಪ್ರದಾಯಿಕ ಮೆರವಣಿಗೆಯನ್ನು ನಿಗದಿಪಡಿಸಲಾಗಿತ್ತು ಆದರೆ ಅದನ್ನು ನಿಲ್ಲಿಸಲಾಯಿತು. ಆ ಸಾಂಪ್ರದಾಯಿಕ ಮೆರವಣಿಗೆಯನ್ನು ಮುಂದಕ್ಕೆ ಕೊಂಡೊಯ್ಯಲು ಎಲ್ಲಾ ವ್ಯವಸ್ಥೆಗಳು ಪೂರ್ಣಗೊಂಡಿವೆ.

**ಮೆರವಣಿಗೆಗೆ ಅವಕಾಶ ನೀಡದಿರುವುದು ಆಶ್ಚರ್ಯ**



### ರಚನೆಯನ್ನು ನಿರ್ಮಿಸಲು ದೇವಾಲಯಗಳು ನಾಶ

**ಇದನ್ನು ಅಲ್ಲಾಹು ಅಕ್ಬರ್ ಎಂಬ ಘೋಷಣೆಗೆ ಹೋಲಿಸಿದ ಅವರು, ಇಂದು ಅಲ್ಲಾಹು ಅಕ್ಬರ್ ಎಂಬ ಘೋಷಣೆ ನಮಗೆ ಇಷ್ಟವಿಲ್ಲ ಎಂದು ಹೇಳಿದರೆ ನಿಮಗೆ ಇಷ್ಟವಾಗುತ್ತದಾ? ಕೆಲವು ಧಾರ್ಮಿಕ ನುಡಿಗಟ್ಟುಗಳ ಮಹತ್ವದ ಕುರಿತು ಮಾತನಾಡಿದ ಮುಖ್ಯಮಂತ್ರಿಗಳು, ನಮ ಪರಂಪರೆ ತುಂಬಾ ವಿಶಾಲವಾಗಿದೆ, ಪುರಾತನವಾಗಿದೆ ನಾನು ನನ್ನ ಇಡೀ ಜೀವನವನ್ನು ಜೈ ಶ್ರೀ ರಾಮ್, ಹರಹರ ಮಹಾದೇವ್ ಮತ್ತು ರಾಧೆ ರಾಧೆಯ ನಮಸ್ಕಾರಗಳೊಂದಿಗೆ ಕಳೆಯುತ್ತೇನೆ. ನಮಗೆ ಅಗತ್ಯವಿಲ್ಲ. ಬೇರೆ ಯಾವುದೇ ನಮಸ್ಕಾರ. ಅವರು ಐತಿಹಾಸಿಕ ಗ್ರಂಥಗಳನ್ನು ಉಲ್ಲೇಖಿಸಿ, ಮೊಘಲ್ ಚಕ್ರವರ್ತಿ ಬಾಬರ್‌ನ ಆತ್ಮಚರಿತ್ರೆಗಳಾದ ಬಾಬರ್ ನಾಮವು ರಚನೆಯನ್ನು ನಿರ್ಮಿಸಲು ದೇವಾಲಯವನ್ನು ನಾಶಪಡಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ.**

> **ಆದರೆ ಪ್ರಚೋದನಕಾರಿ ಘೋಷಣೆಗಳು ಎದ್ದವು ಎಂದು ಹೇಳಲು, ಜೈ ಶ್ರೀರಾಮ್ ಘೋಷಣೆ ಪ್ರಚೋದನಕಾರಿಯಲ್ಲ, ಇದು ನಮ ಭಕ್ತಿಯ ಘೋಷಣೆ, ನಮ ನಂಬಿಕೆಯ ಸಂಕೇತವಾಗಿದೆ**
>
> **-ಯೋಗಿ ಆದಿತ್ಯನಾಥ್**
> **ಉತ್ತರ ಪ್ರದೇಶ ಮುಖ್ಯಮಂತ್ರಿ**

# ಅಹಂಕಾರ ದೂರವಿಡದಿದ್ದರೆ ಯಾರೇ ಆದರೂ ಹಳ್ಳಕ್ಕೆ ಬೀಳಬಹುದು; ಮೋಹನ್ ಭಾಗವತ್

**ಪುಣೆ:** ಅಹಂಕಾರವನ್ನು ದೂರವಿಡಬೇಕು, ಇಲ್ಲದಿದ್ದರೆ ಯಾರೇ ಆದರೂ ಹಳ್ಳಕ್ಕೆ ಬೀಳಬಹುದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ನಿರಂತರ ಸಂತೋಷ ಮತ್ತು ತಪ್ತಿಯನ್ನು ಗುರುತಿಸಿದಾಗ ನಿಸ್ವಾರ್ಥ ಸೇವೆ ನಡೆಯುತ್ತದೆ, ಅದು ಇತರರಿಗೆ ಸಹಾಯ ಮಾಡುವ ಪ್ರವತ್ತಿಯನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದರು. ಮಹಾರಾಷ್ಟ್ರದ ಪುಣೆಯಲ್ಲಿ ಭಾರತ್ ವಿಕಾಸ್ ಪರಿಷತ್‌ನ ವಿಕಲಾಂಗ್ ಕೇಂದ್ರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಭಾಗವತ್, ಸಮಾಜದಲ್ಲಿ ಎಲ್ಲವೂ ತಪ್ಪಾಗಿದೆ ಎಂಬ ಭಾವನೆ ಬೆಳೆಯುತ್ತಿದೆ.

ಆದಾಗ್ಯೂ, ಪ್ರತಿ ನಕಾರಾತ್ಮಕ ಅಂಶಕ್ಕೂ, ಸಮುದಾಯದಲ್ಲಿ 40 ಪಟ್ಟು ಹೆಚ್ಚು ಉತ್ತಮ ಮತ್ತು ಉದಾತ್ತ ಸೇವಾ ಚಟುವಟಿಕೆಗಳು ನಡೆಯುತ್ತಿವೆ. ಈ ಸಕಾರಾತಕ ಪ್ರಯತ್ನಗಳ ಬಗ್ಗೆ ಜಾಗತಿ ಮೂಡಿಸುವುದು ಅತ್ಯಗತ್ಯ ಏಕೆಂದರೆ ಸೇವೆಯು ಸಮಾಜದಲ್ಲಿ ನಿರಂತರ ನಂಬಿಕೆಯನ್ನು ಬೆಳೆಸುತ್ತದೆ ಎಂದು ಅವರು ಹೇಳಿದರು.

ಭಾಗವತ್ ಅವರು ರಾಮಕಷ್ಣ ಪರಮಹಂಸರ ಬೋಧನೆಗಳನ್ನು ಪಕ್ವವಾದ ನಾನು ಮತ್ತು ಕಚ್ಚಾ ನಾನು ಎಂಬ ಅಹಂಕಾರದ ಬಗ್ಗೆ ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಬ್ಬ ಸರ್ವಶಕ್ತ ಇದ್ದಾನೆ, ಅದು ಸಮಾಜಕ್ಕೆ ಸೇವೆ ಸಲ್ಲಿಸಲು ಸ್ಫೂರ್ತಿ ನೀಡುತ್ತದೆ, ಆದರೆ ಅಹಂಕಾರವೂ ಇರುತ್ತದೆ ಎಂದು ಅವರು ಹೇಳಿದರು. ರಾಮಕಷ್ಣ ಪರಮಹಂಸರ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಯು ಎರಡು ನಾನು ಗಳನ್ನು ಹೊಂದಿದ್ದಾನೆ. ಒಂದು ಹಸಿ ಮತ್ತು ಇನ್ನೊಂದು ಮಾಗಿದ. ಒಬ್ಬನು ಮಾಗಿದ ನಾನು ಅನ್ನು ಹಿಡಿದುಕೊಳ್ಳಬೇಕು ಮತ್ತು ಕಚ್ಚಾ ನಾನು ಅನ್ನು ಕೊಲ್ಲಿಯಲ್ಲಿ ಇಡಬೇಕು (ಅಹಂಕಾರವನ್ನು ಸೂಚಿಸುತ್ತದೆ). ಕಚ್ಚಾ ನಾನು, ಅವನು ಅಥವಾ ಅವಳು ರಂಧ್ರಕ್ಕೆ ಬೀಳುತ್ತಾರೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥರು ಹೇಳಿದರು.



> **ಭಾರತದ ಅಭಿವದ್ಧಿಯನ್ನು ಖಚಿತಪಡಿಸಿಕೊಳ್ಳಲು ಸಮಾಜದ ಎಲ್ಲಾ ವರ್ಗಗಳನ್ನು ಸಬಲೀಕರಣಗೊಳಿಸುವುದು ಅತ್ಯಗತ್ಯ, ರಾಷ್ಟ್ರದ ಪ್ರಗತಿಯು ಕೇವಲ ಸೇವೆಗೆ ಸೀಮಿತವಾಗಿಲ್ಲ ಎಂದು ಭಾಗವತ್ ಹೇಳಿದರು. ಸೇವೆ, ಬದಲಾಗಿ, ಅಭಿವದ್ಧಿಗೆ ಕೊಡುಗೆ ನೀಡುವ ಸಾಮರ್ಥ್ಯವನ್ನು ನಾಗರಿಕರನ್ನಾಗಿ ಮಾಡುವ ಗುರಿಯನ್ನು ಹೊಂದಿರಬೇಕು ಎಂದು ಅವರು ತಿಳಿಸಿದರು.**

# ಭಾರತೀಯ ರೈಲ್ವೇಸ್ 'ಸೂಪರ್ ಆ್ಯಪ್' ಬಿಡುಗಡೆಗೆ ಸಿದ್ಧ

## ಕೆಲವೇ ದಿನಗಳಲ್ಲಿ ಪರಿಚಯಿಸಲಾಗುವ ಸೂಪರ್ ಆಪ್ ಅನ್ನು ಈಗಿರುವ ಆ್ಯಪ್‌ಗಳಿಗೆ ಲಿಂಕ್ ಮಾಡುವ ಕೆಲಸ

**ಹೊಸದಿಲ್ಲಿ:** ಭಾರತೀಯ ರೈಲ್ವೇಸ್ ಹೊಸ ಪ್ರಯೋಗಕ್ಕೆ ಮೂರು ತಿಂಗಳ ಹಿಂದೆ ಚಾಲನೆಯನ್ನು ನೀಡಿತ್ತು. ಅದು ಈಗ ಅಂದರೆ ಇನ್ನೇನು ಕೆಲವೇ ದಿನಗಳಲ್ಲಿ ಕಾರ್ಯರೂಪಕ್ಕೆ ಬರಲಿದೆ. ಅದು, ಬಹು ಸೌಲಭ್ಯವಿರುವ ಆಪ್ ಅನ್ನು ಬಿಡುಗಡೆ ಗೊಳಿಸುತ್ತಿದೆ. ಸದ್ಯ ಐಆರ್ ಸಿಟಿಸಿಯ ಹಲವು ಆ್ಯಪ್‌ಗಳು ಕಾರ್ಯನಿರ್ವಹಿಸುತ್ತಿದೆ. ಈಗ ಎಲ್ಲಾ ಅಪ್ಲಿಕೇಶನ್ ಗಳನ್ನು ಒಂದುಗೂಡಿಸಿ ಒಂದೇ ಆಪ್ ಅನ್ನು ಸಿದ್ದಪಡಿಸುವ ಕೆಲಸ ನಡೆಯುತ್ತಿತ್ತು. ಅದು ಈಗ ಮುಕ್ತಾಯದ ಹಂತಕ್ಕೆ ಬಂದಿದೆ. ಇನ್ನೇನು ಕೆಲವೇ ದಿನಗಳಲ್ಲಿ ಪರಿಚಯಿಸಲಾಗುವ ಸೂಪರ್ ಆನ್ ಅನ್ನು ಹಾಲಿ ಇರುವ ಆಪ್ ಗಳಿಗೆ ಲಿಂಕ್ ಮಾಡುವ ಕೆಲಸವು ಬಹುತೇಕ ಪೂರ್ಣಗೊಂಡಿದೆ. ಈಗ ಅಭಿವೃದ್ಧಿ ಪಡಿಸಲಾಗುತ್ತಿರುವ ನೂತನ ಸೂಪರ್ ಆಪ್, ಬಳಕೆದಾರ ಸ್ನೇಹಿಯಾಗಿರುತ್ತದೆ ಎಂದು ರೈಲ್ವೇ ಅಧಿಕಾರಿಗಳು ಹೇಳಿದ್ದಾರೆ. ಈಗಿರುವ IRCTC ರೈಲ್ ಕನೆಕ್ಟ್ ಆಪ್ ಅನ್ನು ಸುಮಾರು ಹತ್ತು ಕೋಟಿ ಜನರು ಡೌನ್ಲೋಡ್ ಮಾಡಿಕೊಂಡಿದ್ದಾರೆ. ರೈಲ್ವೇಸ್ ನ ಈಗಿರುವ ಆಪ್ ಗಳ ಪೈಕಿ ಇದೇ ಅತಿಹೆಚ್ಚು ಡೌನ್ಲೋಡ್ ಆಗಿರುವ ಆಪ್ ಆಗಿದೆ. ಈಗ ವಿವಿಧ ಸೇವೆಗಳಿಗೆ ಪ್ರತ್ಯೇಕ ಪ್ರತ್ಯೇಕ ಆಪ್ ಗಳಿವೆ. ಈಗ ಎಲ್ಲವನ್ನೂ ಒಂದಕ್ಕೆ ಸಿಂಕ್ ಮಾಡಲಾಗುತ್ತದೆ. ಸೂಪರ್ ಆಪ್ ಅನ್ನು ಜಾರಿಗೆ ತರುವ ಮೂಲಕ, ರೈಲ್ವೇಸ್ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ಗುರಿಯನ್ನು ಹೊಂದಿದೆ. ಎಲ್ಲಾ ಆ್ಯಪ್ ಗಳನ್ನು ಒಂದಕ್ಕೆ ಲಿಂಕ್ ಮಾಡುವ ಮೊಬೈಲ್ ಅಪ್ಲಿಕೇಶನ್ ಅಭಿವೃದ್ದಿಯನ್ನು ಕೇಂದ್ರೀಯ ರೈಲ್ವೆ ಮಾಹಿತಿ ವ್ಯವಸ್ಥೆ ಮತ್ತು IRCTC ಜಂಟಿಯಾಗಿ ಮಾಡುತ್ತಿದೆ. ಹೊಸ ಸೂಪರ್ ಆಪ್ ನಲ್ಲಿ ರಿಯಲ್ ಟೈಮ್ ಅಪ್ಲಿಕೇಶನ್ ನಲ್ಲಿ, ಯಾವ ರೈಲು ಪ್ರಯಾಣಕ್ಕಾಗಿ ಟಿಕೆಟ್ ಬುಕ್ ಮಾಡಲಾಗಿದೆಯೋ ಅದರ ಪ್ರಕಾರ ರೈಲ್ವೆಯು ಯಾವ ಸ್ಟೇಶನ್ ಹತ್ತಿರವಿದೆ ಎನ್ನುವ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಜೊತೆಗೆ, ಪ್ಲ್ಯಾಟಫಾರಂ ಟಿಕೆಟ್ ಅನ್ನೂ ಖರೀಸಿದಬಹುದು. ಹೊಸ ಆಪ್ ನಲ್ಲಿ ಬಿ2ಬಿ ಸೌಲಭ್ಯವೂ ಇರಲಿದೆ. ಆ ಮೂಲಕ, ಲಾಜಿಸ್ಟಿಕ್ಸ್ ಕಂಪನಿಗಳಿಗೆ ಸರಕು ಸೇವೆಗಳನ್ನು ಕಾಯ್ದಿರಿಸಲು ಅವಕಾಶವನ್ನು ನೀಡಲಾಗುತ್ತದೆ.

ಸೆಪ್ಟಂಬರ್ ತಿಂಗಳಲ್ಲಿ 100 ದಿನದ ಟಾರ್ಗೆಟ್ ಅನ್ನು ಇಟ್ಟುಕೊಂಡು ಲಾಂಚ್ ಮಾಡುವ ಗುರಿಯನ್ನು ಹೊಂದಲಾಗಿತ್ತು. ಈ ತಿಂಗಳೇ ಸೂಪರ್ ಆಪ್, ಬಿಡುಗಡೆಯಾಗುವುದು ಖಾತ್ರಿಯಾಗಿದ್ದರೂ, ದಿನಾಂಕ ಇನ್ನೂ ನಿಗದಿಯಾಗಿಲ್ಲ.




**ಎಲ್ಲಾ ಸೇವೆಗಳು ಒಂದೇ ಆ್ಯಪ್‌ನಲ್ಲಿ**

### ಸದ್ಯ ಈಗಿರುವ ಆ್ಯಪ್‌ಗಳು

- **ಟಿಕೆಟಿಗಾಗಿ** - IRCTC **ರೈಲ್ ಕನೆಕ್ಟ್**
- **ಆಹಾರಕ್ಕಾಗಿ** - IRCTC **ಇಕೇಟರಿಂಗ್**
- **ಪ್ರತಿಕ್ರಿಯೆಗಾಗಿ** - IRCTC **ಮದದ್**
- **ಅಡ್ವಾನ್ಸ್ ಬುಕ್ಕಿಂಗಿಗಾಗಿ** - IRCTC **ಯುಟಿಎಸ್**
- **ರೈಲಿನ ಸದ್ಯದ ಲೋಕೇಶನ್ ಮಾಹಿತಿಗಾಗಿ - ನ್ಯಾಷನಲ್ ಟ್ರೈನ್ ಎಂಕ್ವೈರಿ ಸಿಸ್ಟಂ**

> **ಭಾರತೀಯ ರೈಲ್ವೇಸ್ ಈಗಿರುವ ಐದು ವಿವಿಧ ಆಪ್ ಗಳನ್ನು ಒಂದೇ ಸೂಪರ್ ಆಪ್ ಗೆ ಸಿಂಕ್ ಮಾಡುವ ಕೆಲಸವನ್ನು ಬಹುತೇಕ ಪೂರ್ಣಗೊಳಿಸಿದೆ. ಈ ತಿಂಗಳಲ್ಲಿ ಈ ಆಪ್ ಬಿಡುಗಡೆಯಾಗಲಿದೆ. ಬಿಡುಗಡೆಯ ದಿನಾಂಕವನ್ನು ಇನ್ನೂ ಪ್ರಕಟಿಸಬೇಕಾಗಿದೆ. ಸುಮಾರು ಮೂರು ತಿಂಗಳಿನಿಂದ ಆಪ್ ಸಿಂಕ್ ಮಾಡುವ ಕೆಲಸ ಚಾಲ್ತಿಯಲ್ಲಿದೆ.**

- **ಡಿಸೆಂಬರ್ ತಿಂಗಳಲ್ಲಿ ಹೊಸ ಆಪ್ ಬಿಡುಗಡೆ ಸಾಧ್ಯತೆ, ರೈಲ್ವೇಸ್ ದಿನಾಂಕ ಇನ್ನೂ ಘೋಷಣೆ**
- **ಈಗಿರುವ** IRCTC **ರೈಲ್ ಕನೆಕ್ಟ್ ಆಪ್ ಅನ್ನು ಸುಮಾರು ಹತ್ತು ಕೋಟಿ ಜನರು ಡೌನ್ಲೋಡ್ ಮಾಡಿಕೊಂಡಿದ್ದಾರೆ**

ಉದಯ ವಾಹಿನಿ
ದೇಶ/ವಿದೇಶ
ಬುಧವಾರ 18 ಡಿಸೆಂಬರ್ 2024


## ಮಿನಿ ನ್ಯೂಸ್

### ತುಳಸಿ ಗೌಡ ಪರಿಸರ ಸಂರಕ್ಷಣೆಯ ಜ್ಯೋತಿಯಾಗಿ ಉಳಿಯಲಿದ್ದಾರೆ; ಮೋದಿ



**ನವದೆಹಲಿ:** ಪರಿಸರವಾದಿ ತುಳಸಿ ಗೌಡ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಪರಿಸರ ಸಂರಕ್ಷಣೆಗೆ ಮಾರ್ಗದರ್ಶಕ ಜ್ಯೋತಿಯಾಗಿ ಉಳಿಯಲಿದ್ದಾರೆ ಎಂದು ಹೇಳಿದ್ದಾರೆ. ಕರ್ನಾಟಕದ ಪೂಜ್ಯ ಪರಿಸರವಾದಿ ಮತ್ತು ಪದ್ಮ ಪ್ರಶಸ್ತಿ ಪುರಸ್ಕೃತ ತುಳಸಿ ಗೌಡ ಜಿ ಅವರ ನಿಧನದಿಂದ ತೀವ್ರ ದುಃಖವಾಗಿದೆ. ಅವರು ಪ್ರಕತಿಯನ್ನು ಪೋಷಿಸಲು, ಸಾವಿರಾರು ಸಸಿಗಳನ್ನು ನೆಡಲು ಮತ್ತು ನಮ ಪರಿಸರವನ್ನು ಸಂರಕ್ಷಿಸಲು ತಮ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದು ಮೋದಿ ಎಕ್ಸ್ ಮಾಡಿದ್ದಾರೆ.

ಅವರು ಪರಿಸರ ಸಂರಕ್ಷಣೆಗಾಗಿ ಮಾರ್ಗದರ್ಶಿ ಬೆಳಕಾಗಿ ಉಳಿಯುತ್ತಾರೆ. ಅವರ ಕೆಲಸವು ನಮ ಗ್ರಹವನ್ನು ರಕ್ಷಿಸಲು ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಸಂತಾಪಗಳು. ಓಂ ಶಾಂತಿ, ಅವರು ಸೇರಿಸಿದ್ದಾರೆ.

ತುಳಸಿಗೌಡ ಅವರು ವಯೋಸಹಜ ಕಾಯಿಲೆಗಳಿಂದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾಳಿ ಗ್ರಾಮದ ತಮ ನಿವಾಸದಲ್ಲಿ ನಿಧನರಾದರು. ಆಕೆಗೆ 86 ವರ್ಷವಾಗಿತ್ತು. ಹಾಲಕ್ಕಿ ಜನಾಂಗಕ್ಕೆ ಸೇರಿದ ಇವರು ಓರ್ವ ಪುತ್ರ, ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಅವರ ಕೆಲಸವನ್ನು ಗುರುತಿಸಿ, ಅವರಿಗೆ 2021 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.

### ಶಾಲೆಯಲ್ಲಿ ಗುಂಡಿನ ದಾಳಿ ಐವರ ಸಾವು

**ವಾಷಿಂಗ್ಟನ್:** ಅಮೆರಿಕದ ವಿಸ್ಕಿನ್ಸನ್ ನ ಅಬಂಡಂಟ್ ಲೈಫ್ ಕ್ರಿಶ್ಚಿಯನ್ ಸ್ಕೂಲಿನಲ್ಲಿ ಮುಂಜಾನೆ ನಡೆದ ಗುಂಡಿನ ದಾಳಿಯಲ್ಲಿ ಶಂಕಿತ ದಾಳಿಕೋರ ಸೇರಿದಂತೆ ಐವರು ಮೃತಪಟ್ಟು ಕನಿಷ್ಠ ಆರು ಮಂದಿ ಗಾಯಗೊಂಡಿದ್ದಾರೆ. ದಾಳಿ ನಡೆಸಿದ ವಿದ್ಯಾರ್ಥಿ ಬಾಲಾಪರಾಧಿ ಎನ್ನಲಾಗಿದ್ದು, ಆತನ ಮೃತದೇಹವೂ ಪತ್ತೆಯಾಗಿದ್ದಾನೆ. ಮುಂಜಾನೆ ನಡೆದ ದಾಳಿಯ ಬಗ್ಗೆ ಪೊಲೀಸರು ತಕ್ಷಣ ಕ್ರಮ ಕೈಗೊಂಡರು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಪೊಲೀಸ್ ಅಧಿಕಾರಿಗಳು ಇಲ್ಲಿ ಗುಂಡು ಹಾರಿಸಿಲ್ಲ ಎಂದು ಪೊಲೀಸ್ ಮುಖ್ಯಸ್ಥ ಶಾನ್ ಎಫ್ ಬರ್ನ್ಸ್ ದೃಢಪಡಿಸಿದ್ದಾರೆ. ಗಾಯಾಳುಗಳಲ್ಲಿ ಸಣ್ಣಪುಟ್ಟ ಗಾಯಗಳಾದವರಿಂದ ಹಿಡಿದು ಪ್ರಾಣಾಪಾಯದ ಸಾಧ್ಯತೆಯ ಗಾಯಗಳೂ ಆಗಿವೆ ಎಂದು ಸ್ಪಷ್ಟಪಡಿಸಿದ್ದು, ಈ ಘಟನೆಯನ್ನು ಅವರು ಮೆಡಿಸನ್ ಮತ್ತು ಇಡೀ ದೇಶಕ್ಕೆ ಬೇಸರದ, ತೀರಾ ಬೇಸರದ ದಿನ'' ಎಂದು ಬಣ್ಣಿಸಿದ್ದಾರೆ. ಈ ಶಾಲೆಯಲ್ಲಿ ಕಿಂಡರ್‌ಗಾರ್ಡ್‌ನಿಂದ ಹಿಡಿದು 12ನೇ ತರಗತಿಯವರೆಗೆ 390 ವಿದ್ಯಾರ್ಥಿಗಳಿದ್ದರು. ಕ್ಯಾಂಪಸ್ ನಲ್ಲಿ ಚರ್ಚ್ ಹಾಗೂ ಒಂದು ಬಾಲ ಶಿಕ್ಷಣ ಕೇಂದ್ರವೂ ಇದೆ. ಇನ್ನಷ್ಟು ಮಾಹಿತಿ ಕಾಯುತ್ತಿರುವ ಸಂದರ್ಭದಲ್ಲಿ ಮಕ್ಕಳಿಗಾಗಿ, ಶಿಕ್ಷಕರಿಗಾಗಿ ಹಾಗೂ ಇಡೀ ಎಬಂಡಂಟ್ ಲೈಫ್ ಶಾಲಾ ಸಮುದಾಯಕ್ಕಾಗಿ ನಾವು ಪ್ರಾರ್ಥಿಸುತ್ತಿದ್ದೇವೆ, ತಕ್ಷಣವೇ ಸ್ಪಂದಿಸಿದವರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ ಎಂದು ವಿಸ್ಕಿನ್ಸನ್ ಗವರ್ನರ್ ಟೋನಿ ಎವರ್ಸ್ ಹೇಳಿಕೆ ನೀಡಿದ್ದಾರೆ. ಅಧ್ಯಕ್ಷ ಜೋ ಬೈಡೇನ್ ಅವರಿಗೂ ಪರಿಸ್ಥಿತಿ ಬಗ್ಗೆ ವಿವರಿಸಲಾಗಿದ್ದು, ಸ್ಥಳೀಯ ಅಧಿಕಾರಿಗಳನ್ನು ಶ್ವೇತಭವನ ಅಧಿಕಾರಿಗಳು ಸಂಪರ್ಕಿಸಿದ್ದಾರೆ.

### ಮೊಜಾಂಬಿಕಾ ಮೇಲೆ ಅಪ್ಪಳಿಸಿದ ಚಿಡೊ ಚಂಡಮಾರುತ

**ಮಾಪ್ತೊ:** ಪೂರ್ವ ಆಫ್ರಿಕಾದ ರಾಷ್ಟ್ರವಾದ ಮೊಜಾಂಬಿಕಾದ ಮೇಲೆ ಚಿಡೊ ಚಂಡಮಾರುತ ಅಪ್ಪಳಿಸಿರುವ ಪರಿಣಾಮ ಇಲ್ಲಿವರೆಗೆ ಕನಿಷ್ಠ 34 ಜನ ಮೃತಪಟ್ಟಿದ್ದಾರೆ. ಚಿಡೊ ಚಂಡಮಾರುತ ಪರಿಣಾಮ ಮೊಜಾಂಬಿಕಾದ ಕರಾವಳಿ ಹಾಗೂ ಒಳನಾಡಿನಲ್ಲಿ ಭಾರಿ ಪ್ರಮಾಣದ ಗಾಳಿ, ಮಳೆ ಹಾಗೂ ಭೂಕುಸಿತಗಳು ಸಂಭವಿಸಿವೆ. ಇದರಿಂದ ಅಲ್ಲಲ್ಲಿ ಪ್ರವಾಹ ಉಂಟಾಗಿದೆ ಎಂದು ಮೊಜಾಂಬಿಕಾದ ನೈಸರ್ಗಿಕ ವಿಕೋಪ ಪರಿಹಾರ ಪಡೆ ಕಚೇರಿ ತಿಳಿಸಿದೆ.

**34 ಜನ ಸಾವು**

ಹಿಂದೂ ಮಹಾಸಾಗರದ ಮೊಜಾಂಬಿಕಾ ಚಾನಲ್‌ನಲ್ಲಿ ಉಂಟಾಗಿದ್ದ ಚಿಡೊ ಚಂಡಮಾರುತದಿಂದ ಸುಮಾರು 1.50 ಲಕ್ಷ ಜನರ ಮೇಲೆ ವಸತಿ, ಆಹಾರ ಸೇರಿದಂತೆ ಹಲವು ಕೆಟ್ಟ ಪರಿಣಾಮ ಉಂಟಾಗಿವೆ ಎಂದು ತಿಳಿಸಿದೆ.

ಲಕ್ಷಾಂತರ ಮನೆಗಳ ಛಾವಣಿಗಳು ಗಾಳಿಗೆ ಹಾರಿ ಹೋಗಿವೆ. 2 ಲಕ್ಷಕ್ಕೂ ಅಧಿಕ ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿತ್ತು ರಕ್ಷಣಾ ತಂಡ ಪರಿಹಾರ ಕಾರ್ಯಾಚರಣೆಗಳನ್ನು ಆರಂಭಿಸಿದೆ ಎಂದು ಹೇಳಿದೆ. ಚಂಡಮಾರುತದಿಂದ ಸಾವು-ನೋವಿನ ಪ್ರಮಾಣ ಇನ್ನೂ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಬಹುದು ಎಂದು ವಿಶ್ವಸಂಸ್ಥೆಯ ಮಾನವೀಯ ಕಾರ್ಯಪಡೆ ಒಸಿಎಚ್‌ಎ ತಿಳಿಸಿದೆ.

### ವಂಚನೆ: 22 ವರ್ಷಗಳ ಬಳಿಕ ಪಾಕಿಸ್ತಾನದಿಂದ ಭಾರತಕ್ಕೆ ಮರಳಿದ ಮಹಿಳೆ

**ಲಾಹೋರ್:** ಟ್ರಾವೆಲ್ ಏಜೆಂಟ್‌ನಿಂದ ಮೋಸಹೋಗಿ ಕಳೆದ 22 ವರ್ಷಗಳಿಂದ ಪಾಕಿಸ್ತಾನದಲ್ಲಿ ನೆಲೆಸಿದ್ದ ಭಾರತೀಯ ಮಹಿಳೆ ಲಾಹೋರ್‌ನ ವಾಘಾ ಗಡಿಯ ಮೂಲಕ ತಾಯ್ನಾಡಿಗೆ ಮರಳಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುಂಬೈ ಮೂಲದ ಹಮೀದಾ ಬಾನೊ ಎಂಬುವರು 2002ರಲ್ಲಿ ಪಾಕಿಸ್ತಾನದ ಹೈದರಾಬಾದ್‌ಗೆ ಬಂದಿದ್ದರು. ದುಬೈನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಏಜೆಂಟ್ ಒಬ್ಬರು ಪಾಕಿಸ್ತಾನದ ಸಿಂದ್ ಪ್ರಾಂತ್ಯದ ಹೈದರಾಬಾದ್‌ಗೆ ಕರೆತಂದಿದ್ದರು ಎಂದು ಬಾನೊ ಹೇಳಿದ್ದಾರೆ.

ಕರಾಚಿಯಿಂದ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದ ಮಹಿಳೆ, ವಾಘಾ ಗಡಿ ಮೂಲಕ ಭಾರತಕ್ಕೆ ಪ್ರವೇಶಿಸಿದ್ದಾರೆ. ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಆಕೆಯ ನಿರ್ಗಮನಕ್ಕೆ ಸಾಕ್ಷಿಯಾಗಿದ್ದಾರೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ. 22 ವರ್ಷಗಳ ಬಳಿಕ ತಮ್ಮ ಕುಟುಂಬದೊಂದಿಗೆ ಮತ್ತೆ ಒಂದಾಗಿರುವುದಕ್ಕೆ ಬಾನೊ ಸಂತೋಷ ವ್ಯಕ್ತಪಡಿಸಿದ್ದಾರೆ. ನಾನು ಭಾರತಕ್ಕೆ ಹಿಂದಿರುಗುವ ಭರವಸೆಯನ್ನು ಕಳೆದುಕೊಂಡಿದ್ದೆ. ಆದರೆ, ಈ ದಿನವನ್ನು ನೋಡಲು ಅದೃಷ್ಟಶಾಲಿಯಾಗಿದ್ದೇನೆ ಎಂದು ಅವರು ಹೇಳಿದ್ದಾರೆ.

